# ಸಂಘದ ಶಿಬಿರದಲ್ಲಿ ಗಾಂಧೀಜಿ


೧೯೩೪ರಲ್ಲಿ ನಡೆದ ಘಟನೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ವರ್ಧಾ ಜಿಲ್ಲೆಯ ಹೇಮಂತ ಶಿಬಿರ ಡಿಸೆಂಬರ್‌ನಲ್ಲಿ ವರ್ಧಾದಲ್ಲಿ ನಡೆಯಲಿತ್ತು. ಶಿಬಿರಕ್ಕಾಗಿ ನಾವು ವರ್ಧಾ ಸುತ್ತಮುತ್ತಲಲ್ಲಿ ವಿಶಾಲವಾದ ಜಾಗ ಹುಡುಕಲು ಪ್ರಾರಂಭಿಸಿದೆವು. ಸೇವಾಗ್ರಾಮ ರಸ್ತೆಯಲ್ಲಿರುವ ದಿವಂಗತ ಶ್ರೀ ಜಮುನಾಲಾಲ್ ಬಜಾಜರ ಹೊಲವು ಶಿಬಿರಕ್ಕಾಗುವಷ್ಟು ವಿಶಾಲವಾಗಿದ್ದುದರಿಂದಲೂ, ರಸ್ತೆಗೆ ಸಮೀಪದಲ್ಲಿರುವುದರಿಂದಲೂ ಅದು ನಮಗೆ ಹಿಡಿಸಿತು. ಪಕ್ಕದಲ್ಲಿ ಸತ್ಯಾಗ್ರಹ ಆಶ್ರಮವಿತ್ತು. ಮಹಾತ್ಮಾ ಗಾಂಧಿಯವರು ಅದರ ಕೇಂದ್ರ ಭಾಗದಲ್ಲಿ ವಾಸಿಸುತ್ತಿದ್ದರು.

**ಗಾಂಧೀಜಿ ಆಶ್ರಮದ ಪಕ್ಕದಲ್ಲೇ ಸಂಘದ ಶಿಬಿರ**

ಆರಿಸಿದ ಈ ಜಾಗವನ್ನು ನನ್ನ ಕೆಲವು ಗಣ್ಯ ಸ್ನೇಹಿತರಿಗೆ ತೋರಿಸಿದಾಗ, ಅವರಲ್ಲಿ ಕೆಲವರು ಅದು ಶ್ರೀ ಜಮುನಾಲಾಲರಂತಹ

**ಅಪ್ಪಾಜಿ ಜೋಷಿ**

ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಿಗೆ ಸೇರಿರುವುದರಿಂದ ಆರ್. ಎಸ್. ಎಸ್. ಶಿಬಿರಕ್ಕಾಗಿ ಕೊಡುವರೇ ಎಂಬ ಸಂದೇಹವನ್ನು ವ್ಯಕ್ತಪಡಿಸಿದರು. "ನನಗೆ ಜಮುನಾಲಾಲರು ಚೆನ್ನಾಗಿ ಗೊತ್ತು. ಖಂಡಿತ ಅವರು ನನಗೆ ಇಲ್ಲ ಎನ್ನುವುದಿಲ್ಲ" ಎಂದು ಹೇಳಿದೆ. ಅದಕ್ಕೆ ಈ ಸ್ನೇಹಿತರು, "ಈ ಜಾಗ ಸಿಕ್ಕಿದರೂ ತೆಗೆದುಕೊಳ್ಳಬಾರದು. ಏಕೆಂದರೆ ಪಕ್ಕದಲ್ಲೇ ಮಹಾತ್ಮಾ ಗಾಂಧಿಯವರಿದ್ದಾರೆ. ಅವರಿಗೆ ಶಿಬಿರದಿಂದ ತೊಂದರೆಯಾಗಬಹುದು. ಶಿಬಿರದಲ್ಲಿ ಸಣ್ಣ ಹುಡುಗರಿರುವುದರಿಂದ ಸ್ವಾಭಾವಿಕವಾಗಿ ಸ್ವಲ್ಪ ಗಲಾಟೆಯಿರುತ್ತದೆ. ನಿಮ್ಮ ಘೋಷವಾದ್ಯವೂ ಅಸಾಧಾರಣ ಸಮಯಗಳಲ್ಲಿ ಆಗುವುದರಿಂದ ಗಾಂಧೀಜಿಯವರ ನಿದ್ರೆಯನ್ನೂ ಕೆಡಿಸಬಹುದು" ಎಂದರು. "ಗಾಂಧೀಜಿಯವರ ಸೇವೆ ಮಾಡುವ ಅವಕಾಶ ನನಗೂ ಇದ್ದಿದ್ದರಿಂದ ಅವರ ಸ್ವಭಾವದ ಪರಿಚಯವೂ ನನಗಿದೆ.



★

## ಇಬ್ಬರು ಮಹಾಪುರುಷರ ಸಂಗಮ

★



## "ಇತರರನ್ನು ದ್ವೇಷಿಸದೆ ಹಿಂದುಗಳನ್ನು ಸಂಘಟಿಸುವುದು ರಾಷ್ಟ್ರೀಯ ಹಿತಕ್ಕೆ ವಿರುದ್ಧವಾದುದೇನಲ್ಲ"

—ಗಾಂಧೀಜಿ

ಜೊತೆಗೆ ಜಮುನಾಲಾಲರಿಗೆ ಅವರು ಚೆನ್ನಾಗಿ ಗೊತ್ತು. ಗಾಂಧೀಜಿಯವರಿಗೆ ಶಿಬಿರವು ಸ್ವಲ್ಪವೂ ತೊಂದರೆ ಕೊಡದಿರುವ ಬಗ್ಗೆ ಎಳ್ಳಷ್ಟು ಸಂದೇಹವಿದ್ದರೂ ಅವರು ಖಂಡಿತ ಶಿಬಿರಕ್ಕೆ ಅವಕಾಶ ಕೊಡುವುದಿಲ್ಲ. ಆದ್ದರಿಂದ ನಾವು ಪ್ರಯತ್ನ ಮಾಡುವುದು ಒಳ್ಳೆಯದು. ವರ್ಧಾ ಸಮೀಪದಲ್ಲಿ ಬೇರೆ ಒಳ್ಳೆಯ ಜಾಗವೇ ಇಲ್ಲ. ಈ ಜಾಗ ಸಿಗುತ್ತದೆಂದು ನನಗೆ ಅನಿಸುತ್ತಿದೆ" ಎಂದು ನಾನು ಉತ್ತರಿಸಿದೆ.

### 'ಇನ್ನೇನಾದರೂ ಬೇಕೇ ?'

ಮಾರನೆಯ ದಿನ ನನ್ನ ನಿಕಟ ಸ್ನೇಹಿತನೊಬ್ಬನ ಜೊತೆಯಲ್ಲಿ ಸೇಠ್ ಜಮುನಾಲಾಲರ ಬಳಿಗೆ ಹೋಗಿ ಅವರ ಜಾಗದಲ್ಲಿ ಶಿಬಿರ ನಡೆಸಲು ಅನುಮತಿ ಕೇಳಿದೆ. ಬಹಳ ಹೊತ್ತು ಯೋಚಿಸಿದ ನಂತರ ಅವರು, "ಕೊಡೋದಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ನಿಮಗೆ ಗೊತ್ತಿರುವಂತೆ ಗಾಂಧೀಜಿ ಹತ್ತಿರದಲ್ಲೇ ವಾಸಿಸುತ್ತಾರೆ. ಶಿಬಿರದಿಂದ ಅವರಿಗೆ ತೊಂದರೆಯಾಗಬಹುದೋ ಏನೋ" ಎಂದರು. ಅದಕ್ಕೆ ನಾನು, "ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಿಸ್ತಿನ ಬಗ್ಗೆ ನಿಮಗೆ ಗೊತ್ತಿದೆ. ಗಾಂಧೀಜಿ ಬಗ್ಗೆ ನಮಗಿರುವ ಗೌರವವೂ ನಿಮಗೆ ತಿಳಿದಿದೆ. ಆದ್ದರಿಂದ ಅವರಿಗೆ ಸ್ವಲ್ಪವೂ ತೊಂದರೆಯಾಗದೆಂದು ನಾನು ಭರವಸೆ ಕೊಡುತ್ತೇನೆ" ಎಂದೆ. ಈ ಆಶ್ವಾಸನೆ ಕೊಟ್ಟ ಮೇಲೆ ಜಮುನಾಲಾಲರು ಸಂತೋಷದಿಂದ ಅನುಮತಿ ನೀಡಿದ್ದೇ ಅಲ್ಲದೆ, "ಶಿಬಿರಕ್ಕೆ ಇನ್ನೇನಾದರೂ ಬೇಕಾದರೆ ಹೇಳಿ. ಶಿಬಿರದ ಸಮಯದಲ್ಲಿ ಬಹುಶಃ ನಾನು ಇಲ್ಲಿರಲಿಕ್ಕಿಲ್ಲ. ಆದರೂ ನಿಮಗೆ ಬೇಕಾದ್ದನ್ನೆಲ್ಲ ಕೊಡುವಂತೆ ಸೂಚನೆ ಕೊಟ್ಟು ಹೋಗುತ್ತೇನೆ" ಎಂದು ಹೇಳಿದರು. ಇದನ್ನು ಕೇಳಿ ನನಗೆ ಸಂತೋಷವಾಯಿತು. ಜಮುನಾಲಾಲರಿಗೆ ನನ್ನ ಮೇಲೆ ಸೋದರ ಪ್ರೇಮ. ೧೯೩೫ ರಿಂದೀಚೆಗೆ ರಾಜಕೀಯ ಭಿನ್ನಾಭಿಪ್ರಾಯಗಳು ನಮ್ಮನ್ನು ಬೇರೆಬೇರೆ ಮಾರ್ಗಗಳಲ್ಲಿ ಕೊಂಡೊಯ್ದಿದ್ದರೂ, ಇಬ್ಬರ ನಡುವೆ ಅತ್ಯಂತ ಪ್ರೀತಿಯಿತ್ತು. ೧೯೩೨ ರ ನಂತರ ನಾನು ರಾಜಕೀಯದಲ್ಲಿ ಆಸಕ್ತಿ ವಹಿಸದಿದ್ದರಿಂದ ಸಂಘರ್ಷಕ್ಕೆ ಅವಕಾಶವೇ ಇರಲಿಲ್ಲ.

ಜಾಗ ನಮ್ಮ ನಸಕ್ಕೆ ಬಂತು, ಶಿಬಿರ ನಿರ್ಮಾಣ ಕೊನೆಗೊಂಡಿತು. ಡಿಸೆಂಬರ್ ೨೨-೨೩ ರ ಮಧ್ಯರಾತ್ರಿಯ ಹೊತ್ತಿಗೆ ಎಲ್ಲ ಸ್ವಯಂಸೇವಕರೂ ಬಂದು ಸೇರಿದರು. ಕೆಲವರು ರೈಲಿನಲ್ಲಿ, ಕೆಲವರು ಬಸ್ಸಿನಲ್ಲಿ, ಕೆಲವರು ಎತ್ತಿನಗಾಡಿಯಲ್ಲಿ, ಇನ್ನು ಕೆಲವರು ಕಾಲುನಡಿಗೆಯಲ್ಲಿ ಬಂದಿದ್ದರು.. ಮಾರನೆಯ ದಿನ ಬೆಳಿಗ್ಗೆ ಅಮರಾವತಿಯ ಶ್ರೀ ಮೋರೋಪಂತ ಜೋಷಿಯವರು ಶಿಬಿರವನ್ನು ಉದ್ಘಾಟಿಸಿದರು. ಈ ಸಮಾರಂಭಕ್ಕೆ ನಗರದ ಗಣ್ಯರೇ ಅಲ್ಲದೆ ಸತ್ಯಾಗ್ರಹ ಆಶ್ರಮದ ಸ್ತ್ರೀಪುರುಷರೂ ಬಂದಿದ್ದರು. ಶ್ರೀಮತಿ ಜಾನಕಿಬಾಯಿ ಬಜಾಜರೂ ಇದ್ದರು. ಸಮಾರಂಭದ ಕೊನೆಯಲ್ಲಿ ಅವರು ನನ್ನನ್ನು "ಇನ್ನೇನಾದರೂ ಬೇಕೇ ?" ಎಂದು ಕೇಳಿದರು. ವಾಸ್ತವವಾಗಿ ಎಲ್ಲ ಟೆಂಟುಗಳು, ಪಾತ್ರೆಗಳು ಮತ್ತು ಇತರ ಸಾಮಗ್ರಿಗಳನ್ನು ಅವರೇ ಕೊಟ್ಟಿದ್ದರು. ಆದರೆ ಅವರು ಪುನಃ ಕೇಳಿದ್ದರಿಂದ ನಾನು, "ನಿಮ್ಮ ಸಹಾಯದಿಂದಲೇ ಇಷ್ಟು ದೊಡ್ಡ ಶಿಬಿರ ನಿರ್ಮಿಸಲು ಸಾಧ್ಯವಾಯಿತು. ಎಲ್ಲವೂ ಚೆನ್ನಾಗಿದೆ. ಆದರೆ ಶಿಬಿರದಲ್ಲಿರುವ ಸ್ವಯಂಸೇವಕರ ಸಂಖ್ಯೆ ೧೫೦೦ ಆಗಿದೆ. ಇದು ನಮ್ಮ ನಿರೀಕ್ಷೆಗಿಂತ ೨೦೦ ಹೆಚ್ಚು. ಆದ್ದರಿಂದ ಎಲ್ಲ ಟೆಂಟುಗಳೂ ಭರ್ತಿಯಾಗಿವೆ. ಶಿಬಿರದ ಕೊನೆಯ ದಿನ ದಿ. ೨೬ ರಂದು ನಮ್ಮ ಸರಸಂಘಚಾಲಕರಾದ ಪೂಜನೀಯ ಡಾ| ಹೆಡಗೆವಾರರು ಬರುವವರಿದ್ದಾರೆ. ಅವರಿಳಿದುಕೊಳ್ಳಲು ಇನ್ನೊಂದು ಟೆಂಟ್ ಬೇಕು. ನಿಮ್ಮ ಬಂಗಲೆಯ ಕಾಂಪೌಂಡಿನಲ್ಲಿ ಒಂದು ಟೆಂಟ್ ಇದೆ. ಅದು ನಮಗೆ ಸಾಕಾಗುತ್ತದೆ" ಎಂದೆ.

"ಆದರೆ ಅದು ಗಾಂಧೀಜಿಯವರಿಗಾಗಿದೆ. ಅಲ್ಲಿ ಅವರ ಸಭೆಗಳು ನಡೆಯುತ್ತವೆ. ಆದ್ದರಿಂದ ನಿಮಗೆ ಕೊಡಲು ಸಾಧ್ಯವಾಗುವುದಿಲ್ಲವೇನೋ. ಇರಲಿ, ಗಾಂಧೀಜಿಯವರನ್ನು ಕೇಳಿದ ನಂತರ ಹೇಳುವೆ" ಎಂದರು ಶ್ರೀಮತಿ ಬಜಾಜ್.

### 'ಅಪ್ಪಾಜಿಯವರನ್ನು ಕರೆಯಿರಿ'

ಶಿಬಿರವು ಸತ್ಯಾಗ್ರಹ ಆಶ್ರಮಕ್ಕೆ ತುಂಬ ಹತ್ತಿರದಲ್ಲಿದ್ದುದರಿಂದ ಆಶ್ರಮವಾಸಿಗಳು ಶಿಬಿರದ ಎಲ್ಲ ಚಟುವಟಿಕೆಗಳಲ್ಲೂ ಉಪಸ್ಥಿತರಿರುತ್ತಿದ್ದರು. ಸಂದರ್ಶಕರಿಗಾಗಿ ನಾವು ಮಧ್ಯಾಹ್ನ ೩ ರಿಂದ ೬ ರವರೆಗೆ ಸಮಯ ನಿರ್ಧರಿಸಿದ್ದೆವು. ಆದರೂ ಈ ಮಿತ್ರರು ಎಲ್ಲ ಕಾರ್ಯಕ್ರಮಗಳನ್ನೂ ವೀಕ್ಷಿಸಲು ಬರುತ್ತಿದ್ದರು. ಅವರಲ್ಲಿ ಅನೇಕರು ನನಗೆ ಪರಿಚಿತರಾದ್ದರಿಂದ ಬೇಡವೆನ್ನಲಾಗುತ್ತಿರಲಿಲ್ಲ. ಎಲ್ಲ ಸ್ವಯಂಸೇವಕರೂ ಒಟ್ಟಿಗೆ ಊಟ ಮಾಡುವುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ರಾತ್ರಿ ಎಂಟು ಗಂಟೆಯ ನಂತರ ಶಿಬಿರದೊಳಕ್ಕೆ ಯಾರಿಗೂ ಪ್ರವೇಶವಿರುತ್ತಿರಲಿಲ್ಲ. ೧೦ ಗಂಟೆಗೆ ದೀಪ ಆರಿಸುತ್ತಿದ್ದೆವು. ಎಲ್ಲ ಸ್ವಯಂಸೇವಕರಿಗೂ ಅದು ನಿದ್ರಾ ಸಮಯ. ಈ ನಿಯಮವನ್ನು ಕಡ್ಡಾಯವಾಗಿ ಪಾಲಿಸಲಾಗುತ್ತಿತ್ತು. ಆದರೆ ಶಿಬಿರ ಪ್ರಾರಂಭವಾದ ಮಾರನೆಯ ದಿನವೇ ಆಶ್ರಮದ ಸ್ತ್ರೀ, ಪುರುಷರು ರಾತ್ರಿ ೧೦-೩೦ ಕ್ಕೆ ಶಿಬಿರವನ್ನು ನೋಡಲು ಬಂದರು. ಆ ಸಮಯದಲ್ಲಿ ಪ್ರವೇಶವಿಲ್ಲವೆಂದು ದ್ವಾರದಲ್ಲಿದ್ದ ಕಾರ್ಯಕರ್ತ ಅವರಿಗೆ ತಿಳಿಸಿದ. ಆದರೆ ಆಶ್ರಮವಾಸಿಗಳು ಒಳಗೆ ಹೋಗಲೇಬೇಕೆಂದು ಪಟ್ಟು ಹಿಡಿದು "ಅಪ್ಪಾಜಿ ಜೋಷಿಯವರನ್ನು ಕರೆಯಿರಿ" ಎಂದರು.

### 'ಇದನ್ನು ನೋಡಲೆಂದೇ ಬಂದಿದ್ದೇವೆ'

ಬೈಠಕ್ಕಿನಲ್ಲಿದ್ದ ನಾನು ಹೊರಗೆ ಬಂದೆ. ತಮ್ಮನ್ನು ಒಳಗೆ ಬಿಡಬೇಕೆಂದು ಅವರು ಕೇಳಿಕೊಂಡರು. ನಾನು, "ಈಗ ಶಿಬಿರದಲ್ಲಿ ನೋಡುವಂಥದ್ದೇನೂ ಇಲ್ಲ. ಎಲ್ಲ ಸ್ವಯಂಸೇವಕರೂ ಮಲಗಿದ್ದಾರೆ" ಎಂದೆ. "ಅದನ್ನೇ ನಾವು ನೋಡಬೇಕೆಂದಿರುವುದು" ಎಂದು ಉತ್ತರಿಸಿದ ಓರ್ವ ಆಶ್ರಮವಾಸಿ, "ಅವರು ಹೇಗೆ ಊಟ ಮಾಡುತ್ತಾರೆನ್ನುವುದನ್ನು ನೋಡಿದ್ದೇವೆ, ಅವರು ಮಲಗುವುದನ್ನೂ ನೋಡಬೇಕೆಂದು ನಮ್ಮ ಇಚ್ಛೆ" ಎಂದ. ನನಗೆ ವಿಚಿತ್ರವೆನ್ನಿಸಿತು. ನಾಲ್ವರನ್ನು ಒಳಗೆ ಕರೆದುಕೊಂಡು ಹೋದೆ. ಮಲಗಿದ್ದ ಸ್ವಯಂಸೇವಕ

ಠನ್ನು ಅವರು ನೋಡಿದರು. ಕೆಲವರಿಗೆ ಗೋಣಿ ಚೀಲವೇ ಹಾಸಿಗೆಯಾಗಿತ್ತು. ಕಲವರು ಹರಿದ ಹೊದಿಕೆಯನ್ನು ಹೊದ್ದುಕೊಂಡಿದ್ದರು. ಇದನ್ನು ಕಂಡು ಅವರಿಗೆ ಬಹಳ ಆಶ್ಚರ್ಯ ವಾಯಿತು. "ಇದನ್ನು ನೋಡಲೆಂದೇ ನಾವು ಬಂದೆವು. ನಿಮ್ಮ ಸ್ವಯಂಸೇವಕರೆಲ್ಲ ಅಡಿಯಿಂದ ಮುಡಿಯವರೆಗೆ ಗಣವೇಷದಲ್ಲಿರುತ್ತಾರೆ. ಅದನ್ನೆಲ್ಲ ಅವರೇ ಕೊಂಡುಕೊಂಡಿದ್ದಾರೆಂದು ನೀವು ಹೇಳುತ್ತೀರಿ. ಇಂತಹ ಬೆಲೆಬಾಳುವ ಗಣವೇಷ ಕೊಂಡುಕೊಳ್ಳಬಲ್ಲವರು ಖಂಡಿತ ಶ್ರೀಮಂತರೇ ಆಗಿರಬೇಕು ಅಥವ ಕನಿಷ್ಠ ಪಕ್ಷ ಮಧ್ಯಮ ವರ್ಗದವರಾದರೂ ಆಗಿರಬೇಕು ಎಂದುಕೊಂಡೆವು. ನಾವು ತಿಳಿದುಕೊಂಡಿದ್ದು ಸರಿಯೋ ಅಲ್ಲವೋ ಎಂಬುದನ್ನು ಪರೀಕ್ಷಿಸಲು ಬಂದಿದ್ದೇವೆ. ಬಡವರಾದ ಸ್ವಯಂಸೇವಕರೂ ನಿಮ್ಮ ಶಿಸ್ತಿಗೆ ತಕ್ಕಂತೆ ಗಣವೇಷವನ್ನು ಕೊಂಡುಕೊಳ್ಳುವುದನ್ನು ಕಂಡು ನಮಗೆ ಆಶ್ಚರ್ಯ ಹಾಗೂ ಸಂತೋಷವಾಗಿದೆ" ಎಂದರು.

### ಶಿಬಿರ ನೋಡಲು ಗಾಂಧೀಜಿಯವರ ಇಚ್ಛೆ

ಸೇಠ್ ಜಮನಾಲಾಲರ ಪುತ್ರ ಶ್ರೀ ಕಮಲ ನಯನ ಬಜಾಜರು ಡಿ. ೨೪ ರಂದು ಮಹಾತ್ಮಾ ಗಾಂಧೀಜಿಯವರಿಂದ ನನಗೆ ಪತ್ರವೊಂದನ್ನು ತಂದರು. ಮಹದೇವ ದೇಸಾಯಿಯವರು ಬರೆದಿದ್ದ ಆ ಪತ್ರದಲ್ಲಿ ಹೀಗಿತ್ತು : "ನಿಮ್ಮ ಶಿಬಿರ ನೋಡಿ ಮಹಾತ್ಮಾಜಿಯವರಿಗೆ ಸಂತೋಷ ವಾಗಿದೆ. ಅಲ್ಲಿಗೆ ಭೇಟಿ ಕೊಡಲು ಅವರು ಇಚ್ಛಿಸುತ್ತಾರೆ." ನಾನು ಪತ್ರಕ್ಕೆ ಉತ್ತರ ಬರೆಯುವದರಲ್ಲಿದ್ದೆ. ಆದರೆ ಅಷ್ಟರಲ್ಲಿ ನಾನೇ ಸ್ವತಃ ಮಹಾತ್ಮಾಜಿಯವರಲ್ಲಿಗೆ ಹೋಗಿ ಶಿಬಿರವನ್ನು ಸಂದರ್ಶಿಸಲು ಅವರನ್ನು ಆಹ್ವಾನಿಸಿದರೆ ಒಳ್ಳೆಯದೆಂದು ಕಮಲನಯನರು ಸಲಹೆ ಮಾಡಿದರು. ನಾನು ಅವರೊಡನೆ ಆಶ್ರಮಕ್ಕೆ ಹೋಗಿ ಶಿಬಿರಕ್ಕೆ ಭೇಟಿ ನೀಡಬೇಕೆಂದು ಗಾಂಧೀಜಿಯವರನ್ನು ಗೌರವದಿಂದ ವಿನಂತಿಸಿದೆ. ಗಾಂಧೀಜಿ ಮುಗುಳ್ನಗುತ್ತ, "ನೀವು ನನ್ನನ್ನು ಆಹ್ವಾನಿಸಲಿಲ್ಲ. ನಾನೇ ಶಿಬಿರ ನೋಡಬೇಕೆಂಬ ಇಚ್ಛೆ ವ್ಯಕ್ತಪಡಿಸಿದೆ" ಎಂದರು.

ಶಿಬಿರದ ಆಹ್ವಾನ ಪತ್ರಿಕೆಗಳನ್ನು ಕಳಿಸುವಾಗ ಮಹಾತ್ಮಾಜಿಯವರಿಗೂ ಕಳಿಸಲಾಗಿತ್ತು. ಆದರೆ ಈ ಶಬ್ದಗಳಿಂದ ಅವರನ್ನು ವೈಯಕ್ತಿಕವಾಗಿ ಆಹ್ವಾನಿಸದೆ ನಾನು ಮಾಡಿದ ತಪ್ಪು ಅರಿವಾಯಿತು. ನಾನೆಂದೆ,

**ಧ್ವಜಪ್ರಣಾಮ್ – ಏಕ್....ದೋ....ತೀನ್!**



ಶಿಬಿರದಲ್ಲಿ ಗಾಂಧೀಜಿ ಸ್ವಯಂಸೇವಕರ ಜೊತೆಯಲ್ಲಿ ಭಗವಾ ಧ್ವಜಕ್ಕೆ ಪ್ರಣಾಮ ಸಲ್ಲಿಸಿದರು.

"ನೀವು ಅನೇಕ ಮುಖ್ಯ ವಿಷಯಗಳಲ್ಲಿ ವ್ಯಸ್ತರಾಗಿರುತ್ತೀರಿ. ನಮ್ಮ ಶಿಬಿರ ಸಾಮಾನ್ಯ ತರುಣರ ಸಮ್ಮೇಳನ. ಕಾರ್ಯಕ್ರಮದಲ್ಲೂ ವಿಶೇಷವೇನಿಲ್ಲ. ಆದ್ದರಿಂದ ನಿಮ್ಮ ಅಮೂಲ್ಯ ಸಮಯವನ್ನು ಶಿಬಿರ ನೋಡುತ್ತ ಕಳೆಯಬೇಕೆನ್ನುವುದು ನನಗೆ ಸರಿಯಾಗಿ ತೋರಲಿಲ್ಲ. ಆದರೂ ವೈಯಕ್ತಿಕ ಆಹ್ವಾನ ನೀಡದಿರುವುದಕ್ಕೆ ಕ್ಷಮೆ ಬೇಡುತ್ತೇನೆ. ಶಿಬಿರ ನೋಡಲು ನಿಮಗೆ ಆಸಕ್ತಿಯಿರುವುದನ್ನು ಕಂಡು ನನಗೆ ನಿಜವಾಗಿಯೂ ಆನಂದವಾಗಿದೆ."

ಅದಕ್ಕೆ ಗಾಂಧೀಜಿ, "ಭಾವಣಿಯ ಮೇಲಿನಿಂದ ನಿಮ್ಮ ಕಾರ್ಯಕ್ರಮಗಳನ್ನೆಲ್ಲ ನೋಡುತ್ತಿರುತ್ತೇನೆ. ನಿಮ್ಮ ಘೋಷ ನನಗೆ ಚೆನ್ನಾಗಿ ಹಿಡಿಸಿದೆ. ಬಹಳ ಹೊತ್ತು ಅದನ್ನೇ ಆಲಿಸುತ್ತಿರುತ್ತೇನೆ. ಆಶ್ರಮದ ಅನೇಕರು ಶಿಬಿರ ನೋಡಿಕೊಂಡು ಬಂದು ತಾವು ನೋಡಿದ ಪ್ರತಿಯೊಂದು ವಿಷಯವನ್ನೂ ಪ್ರಶಂಸಿಸಿದ್ದಾರೆ. ಆದ್ದರಿಂದ ನಾನೂ ಸ್ವತಃ ನೋಡಬೇಕೆಂದಿದ್ದೇನೆ. ಸಮಯದ್ದೇ ಪ್ರಶ್ನೆ. ನಿಮ್ಮ ಅನುಕೂಲವನ್ನೂ ನೋಡಬೇಕು. ಯಾವ ಸಮಯ ನಿಮಗೆ ಸರಿಯಾಗಿರುತ್ತೆ?" ಎಂದು ಕೇಳಿದರು. ಆಗ ನಾನು, "ನೀವು ಯಾವಾಗ ಬೇಕಾದರೂ ಬರಬಹುದು. ಯಾವ ಸಮಯದಲ್ಲಾದರೂ ಸ್ವಯಂಸೇವಕರು ತಮ್ಮನ್ನು ಸ್ವಾಗತಿಸಲು ಸಿದ್ಧರಾಗಿದ್ದಾರೆ" ಎಂದೆ. "ನನ್ನ ಪ್ರಾತಃಕಾಲದ ಸಂಚಾರ ಮುಗಿಸಿಕೊಂಡು ಬೆಳಿಗ್ಗೆ ಆರು ಗಂಟೆಗೆ ಬರುವೆ. ನಿಮಗೆ ಅನುಕೂಲವೇ?" ಗಾಂಧೀಜಿ ಕೇಳಿದರು. "ಹಾಗೇ ಆಗಲಿ" ಎಂದು ನಾನು ಅವರ ಅನುಮತಿ ಪಡೆದು ಹೊರಬಂದೆ. ಗಾಂಧೀಜಿ ಬರುತ್ತಾರೆಂದು ಸ್ವಯಂಸೇವಕರಿಗೆ ಹೇಳಿದ ಕೂಡಲೇ ಎಲ್ಲರಿಗೂ ಅಪಾರ ಆನಂದವಾಯಿತು.

### ಗಾಂಧೀಜಿ ಭಗವಾ ಧ್ವಜಕ್ಕೆ ಪ್ರಣಾಮ ಮಾಡಿದರು

ಮಾರನೆಯ ದಿನ ನಿಶ್ಚಿತ ಸಮಯಕ್ಕೆ ೧೫ ನಿಮಿಷ ಮುಂಚೆ ಸ್ವಯಂಸೇವಕರೆಲ್ಲ ಗಣವೇಷದಲ್ಲಿ ಸಾಲಾಗಿ ನಿಂತಿದ್ದರು. ಸಮಯಕ್ಕೆ ಸರಿಯಾಗಿ ಮಹಾತ್ಮಾಜಿ ಶಿಬಿರ

## "ಶಿಬಿರಕ್ಕೆ ಬಂದವರ ಭಾರಿ ಸಂಖ್ಯೆ, ಅವರ ಶಿಸ್ತು ಮತ್ತು ಸ್ವಚ್ಛತೆಯಿಂದ ನನಗೆ ತುಂಬ ತೃಪ್ತಿಯಾಗಿದೆ"

—ಗಾಂಧೀಜಿ

ದ್ವಾರದ ಬಳಿ ಬಂದರು. ಹೂಮಾಲೆ ಹಾಕಿ ಅವರನ್ನು ಸ್ವಾಗತಿಸಿದೆ. ಅವರ ಜೊತೆ ಮೀರಾ ಬೆಹನ್ ಮತ್ತು ಮಹದೇವ ದೇಸಾಯಿಯವರೂ ಸೇರಿ ಸುಮಾರು ೩೦ - ೩೫ ಜನರಿದ್ದರು. ಗಾಂಧೀಜಿ ಶಿಬಿರದೊಳಕ್ಕೆ ಬರುತ್ತಲೇ ಸ್ವಯಂಸೇವಕರು ಅವರಿಗೆ ಪ್ರಣಾಮ ಸಲ್ಲಿಸಿ, ಯೋಗವ್ಯಾಯಾಮದ ಪ್ರದರ್ಶನ ನೀಡಿದರು. ಆ ಭವ್ಯ ದೃಶ್ಯದಿಂದ ಗಾಂಧೀಜಿ ತುಂಬ ಪ್ರಭಾವಿತರಾದರು. ಅವರು ನನ್ನ ಹೆಗಲ ಮೇಲೆ ಕೈಯಿಟ್ಟು, "ನನಗೆ ಬಹಳ ಸಂತೋಷವಾಗಿದೆ. ದೇಶದಲ್ಲೆಲ್ಲೂ ನಾನು ಇಂತಹ ಭವ್ಯ ದೃಶ್ಯ ನೋಡಿಲ್ಲ" ಎಂದರು. ಅಷ್ಟು ಹೊತ್ತಿಗೆ ಸೂರ್ಯೋದಯವಾಯಿತು. ಸಂಘದ ಧ್ವಜವನ್ನು ಹಾರಿಸಲಾಯಿತು. ಆಗ ನಾವು ಸ್ವಯಂಸೇವಕರೆಲ್ಲ 'ದಕ್ಷ'ದಲ್ಲಿ ನಿಂತೆವು. ಗಾಂಧೀಜಿಯವರೂ ನಮ್ಮ ಜೊತೆಗೇ 'ದಕ್ಷ'ದಲ್ಲಿ ನಿಂತುಕೊಂಡರು. ನಂತರ ನಾವು ಸಂಘದ ಪದ್ಧತಿಯಲ್ಲಿ ಧ್ವಜಕ್ಕೆ ಪ್ರಣಾಮ ಮಾಡಿದೆವು. ಗಾಂಧೀಜಿಯವರೂ ಅದೇ ರೀತಿ ಪ್ರಣಾಮ ಮಾಡಿದರು. ಅದು ಮರೆಯಲಾಗದ ದೃಶ್ಯ. ದೇಶದ ಮಹಾನ್ ನಾಯಕ ಹಾಗೂ ಜನತೆಯ ಅನಭಿಷಿಕ್ತ ಚಕ್ರವರ್ತಿಯು ಉದಯಸೂರ್ಯನ ಅರುಣ ಕಿರಣಗಳ ನಡುವೆ ಭಗವಾ ಧ್ವಜಕ್ಕೆ ಭಕ್ತಿಯಿಂದ ನಮಿಸುತ್ತಿದ್ದನು!

### ಎಷ್ಟು ಸ್ವಚ್ಛ ಅಡುಗೆಮನೆ!

ಇದರ ನಂತರ ಶಿಬಿರದ ವಿವಿಧ ಭಾಗಗಳನ್ನು ತೋರಿಸಲು ಗಾಂಧೀಜಿಯವರನ್ನು ಕರೆದೊಯ್ಯಲಾಯಿತು. ಪಾಕಶಾಲೆಯಲ್ಲಿ ಐವತ್ತು ಅಡಿಗೆಯವರು ಊಟ ತಯಾರಿಸುತ್ತಿದ್ದರು. ಚಪಾತಿಗಳ ರಾಶಿ ಹಾಕಲಾಗಿತ್ತು. ಈ ವಿಭಾಗದಲ್ಲಿನ ಸ್ವಚ್ಛತೆ ಕಂಡು ಮಹಾತ್ಮರಿಗೆ ಆನಂದ ಹಾಗೂ ಆಶ್ಚರ್ಯವಾಯಿತು. "ಸಾಮಾನ್ಯವಾಗಿ ಅಡುಗೆ ವಿಭಾಗ ಕೊಳಕಾಗಿರುತ್ತದೆ. ಆದರೆ ನಿಮ್ಮ ಪಾಕಶಾಲೆ ಈ ನಿಯಮಕ್ಕೆ ಅಪವಾದವಾಗಿದೆ. ಊಟ ಎಷ್ಟು ಹೊತ್ತಿಗೆ?" ಎಂದು ಕೇಳಿದರು. "೧೧ ರಿಂದ ೧೨ ರವರೆಗೆ" ಎಂದು ಉತ್ತರಿಸಿದೆ. ಇಡೀ ಶಿಬಿರವೆಲ್ಲ ಒಂದೇ ಗಂಟೆಯೊಳಗೆ ಭೋಜನ ಮುಗಿಸುತ್ತದೆ, ಒಂದು ರೂಪಾಯಿ ಶಿಬಿರ ಶುಲ್ಕ ಮತ್ತು ಸ್ವಲ್ಪ ಆಹಾರಧಾನ್ಯಕ್ಕೇ ಒಂಭತ್ತು ಊಟ ಕೊಡಲಾಗುತ್ತದೆ ಹಾಗೂ ಏನಾದರೂ ಕಡಿಮೆ ಬಿದ್ದರೆ ಸ್ವಯಂಸೇವಕರೇ ಅದನ್ನು ತುಂಬುತ್ತಾರೆ ಎಂದು ಕೇಳಿ ಗಾಂಧೀಜಿಯವರಿಗೆ ಆಶ್ಚರ್ಯವಾಯಿತು.

### ಸ್ವಯಂಸೇವಕರೊಡನೆ ಸಂಭಾಷಣೆ

ನಂತರ ಗಾಂಧೀಜಿ ವೈದ್ಯಕೀಯ ವಿಭಾಗವನ್ನು ಸಂದರ್ಶಿಸಿದರು. ಒಳಗೆ ಚಿಕಿತ್ಸೆ ಪಡೆಯುತ್ತಿರುವವರನ್ನು ಮಾತನಾಡಿಸಿದಾಗ ಹಳ್ಳಿಗರು ಮತ್ತು ಕೂಲಿಗಳು ಕೂಡ ಸಂಘದ ಸ್ವಯಂಸೇವಕರಾಗಿರುವುದನ್ನು ಅವರು ಗಮನಿಸಿದರು. ಇದರ ನಂತರ ಗಾಂಧೀಜಿ ವಸತಿಗೃಹಗಳಲ್ಲಿ ತಿರುಗಾಡಿದರು. ಒಂದು ಟೆಂಟನ್ನು ಪ್ರವೇಶಿಸಿ ಅದರಲ್ಲಿನ ಸ್ವಯಂಸೇವಕರೊಡನೆ ಹೀಗೆ ಮಾತನಾಡಿದರು :

"ಈ ಸಮವಸ್ತ್ರ ನಿಮಗೆ ಯಾರು ಕೊಡುತ್ತಾರೆ?"

"ನಾವೇ ಇದನ್ನು ಹೊಲಿಸಿಕೊಂಡಿದ್ದೇವೆ."

"ದುಡ್ಡು ಯಾರು ಕೊಡುತ್ತಾರೆ?"

"ನಮ್ಮ ತಂದೆತಾಯಿಗಳು."

"ಇದು ಹಣದ ಅಪವ್ಯಯವೆಂದು ಅವರಿಗೆ ಅನಿಸುವುದಿಲ್ಲವೇ?"

"ಇಲ್ಲ. ಒಂದು ವೇಳೆ ಅಕಸ್ಮಾತ್ ಅವರಿಗೆ ಹಾಗನ್ನಿಸಿದರೂ ನಮ್ಮ ಮಾತು ಕೇಳಿ ದುಡ್ಡು ಕೊಡುತ್ತಾರೆ, ಏಕೆಂದರೆ ಗಣವೇಷ ಇಲ್ಲದೆ ಶಿಬಿರದಲ್ಲಿ ಪ್ರವೇಶವಿಲ್ಲ."

"ಪ್ರವೇಶ ಶುಲ್ಕ ಕೊಟ್ಟು, ಪ್ರಯಾಣದ ಖರ್ಚು ವಹಿಸಿಕೊಂಡು, ಗಣವೇಷಕ್ಕಾಗಿ ದುಡ್ಡು ವೆಚ್ಚಿಸಿ ಇಲ್ಲಿಗೆ ಬರೋದಕ್ಕೆ ಈ ಶಿಬಿರದಲ್ಲಿ ಅಂತಹ ವಿಶೇಷ ಏನಿದೆ?"

"ಅದನ್ನು ಸರಿಯಾಗಿ ಶಬ್ದಗಳಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಇಲ್ಲಿರುವುದು ನಮಗೆ ಆನಂದದ ವಿಷಯ. ಇಲ್ಲಿ ಒಟ್ಟಿಗೆ ಇರುತ್ತೇವೆ, ಆಡುತ್ತೇವೆ, ಊಟ ಮಾಡುತ್ತೇವೆ, ಮಲಗುತ್ತೇವೆ. ಇದರಿಂದ ಸಂತೋಷದ ಜೊತೆಗೆ, ರಾಷ್ಟ್ರಕ್ಕಾಗಿ ಇದನ್ನೆಲ್ಲ ಮಾಡುತ್ತಿದ್ದೇವೆಂಬ ಉದಾತ್ತ ಆನಂದವೂ ಆಗುತ್ತದೆ."

### 'ಪಕ್ಕದವನ ಜಾತಿ ನಮಗೆ ಬೇಕಿಲ್ಲ'

ಈ ಉತ್ತರಗಳನ್ನು ಕೇಳಿ ಗಾಂಧೀಜಿಗೆ ಸಂತೋಷವಾಯಿತು. ನಂತರ ಅವರು ಕೇಳಿದ ಒಂದು ವಿಶಿಷ್ಟ ಪ್ರಶ್ನೆಗೆ ಉತ್ತರವಾಗಿ ಒಬ್ಬ ಸ್ವಯಂಸೇವಕ ತಾನು ಬ್ರಾಹ್ಮಣನೆಂದ, ಇನ್ನೊಬ್ಬ ತಾನು ಮರಾಠನೆಂದ, ಮತ್ತೊಬ್ಬ 'ಮಹಾರ್', ಮಗದೊಬ್ಬ 'ತೇಲಿ'. ಆಗ ಮಹಾರ್‌ನನ್ನು ಬಿಟ್ಟು ಮಿಕ್ಕ ಮೂವರನ್ನು ಗಾಂಧೀಜಿ ಕೇಳಿದರು : "ನೀವು ಉಚ್ಚ ಕುಲಕ್ಕೆ ಸೇರಿದವರು. ಈ ಮಹಾರನೊಡನೆ ಇರುತ್ತ ಅವನ ಜೊತೆಯಲ್ಲೇ ಊಟ, ನಿದ್ರೆ ಹೇಗೆ ಮಾಡುತ್ತೀರಿ? ಇದು ಕೀಳೆಂದು ನಿಮಗನಿಸುವುದಿಲ್ಲವೇ?"

"ಈ ರೀತಿಯ ಭೇದಭಾವ ಸಂಘದಲ್ಲಿಲ್ಲ. ನಮ್ಮ ಪಕ್ಕದಲ್ಲಿರುವ ಸ್ವಯಂಸೇವಕ ಯಾವ ಜಾತಿಯವನೆಂದು ನಮಗೆ ಗೊತ್ತೇ ಇಲ್ಲ, ಅದನ್ನು ತಿಳಿದುಕೊಳ್ಳಲು ನಾವು ಇಚ್ಛಿಸುವುದೂ ಇಲ್ಲ. ನಾವೆಲ್ಲ ಹಿಂದುಗಳು, ಆದ್ದರಿಂದ ಎಲ್ಲರೂ ಅಣ್ಣತಮ್ಮಂದಿರು. ಉಚ್ಚ-ನೀಚ ಎಂಬ ಭಾವನೆಯೇ ನಮ್ಮ ಬಳಿ ಸುಳಿಯುವುದಿಲ್ಲ" ಎಂದರು ಸ್ವಯಂಸೇವಕರು.

### 'ಅಸ್ಪೃಶ್ಯತೆಯನ್ನು ಹೇಗೆ ಪರಿಹರಿಸುತ್ತೀರಿ?'

ಈ ಉತ್ತರ ಮಹಾತ್ಮರ ಮೇಲೆ ಒಳ್ಳೆಯ ಪ್ರಭಾವ ಮಾಡಿತು. ಅವರು ನನ್ನನ್ನು "ಇವರ್ನು ಜಾತಿಭೇದವನ್ನು ಮರೆಯುವಂತೆ ಮಾಡಲು ಏನು ಮಾಡುತ್ತೀರಿ? ನಾನು ಮತ್ತು ಇತರ ಸಂಸ್ಥೆಗಳೂ ಈ ಬಗ್ಗೆ ಪ್ರಯತ್ನಿಸುತ್ತಿದ್ದೇವೆ. ಆದರೆ ಜನತೆ ಈ ಭೇದಗಳಿಗೆ ಅಂಟಿಕೊಂಡೇ ಇರುತ್ತಾರೆ. ಅಸ್ಪೃಶ್ಯತೆಯನ್ನು ಅಳಿಸೋದು ಎಷ್ಟು ಕಷ್ಟ ಅನ್ನೋದು ನಿಮಗೆ ಗೊತ್ತು. ಅಂಥದರಲ್ಲಿ ಈ ಕಠಿಣ ಸಮಸ್ಯೆಯನ್ನು ನಿಮ್ಮ ಸಂಘಟನೆಯ ಮಟ್ಟಿಗಾದರೂ ಹೇಗೆ ಪರಿಹರಿಸಿದಿರಿ?" ಎಂದು ಕೇಳಿದರು. ಏನು ಉತ್ತರ

ಕೊಡಬೇಕೆಂದು ನನಗೆ ತೋಚಲಿಲ್ಲ. ಆದರೂ ಹೇಳಿದೆ, "ಅದಕ್ಕಾಗಿ ವಿಶೇಷ ಪ್ರಯತ್ನವನ್ನೇನೂ ಮಾಡುವುದಿಲ್ಲ. ಈ ವಿಷಯದ ಬಗ್ಗೆ ಇತರ ಸಂಸ್ಥೆಗಳಂತೆ ಭಾಷಣಗಳನ್ನಾಗಲಿ, ವಿಶೇಷ ಕಾರ್ಯಕ್ರಮಗಳನ್ನಾಗಲಿ ಇಟ್ಟುಕೊಂಡಿಲ್ಲ. ಕೇವಲ ಎಲ್ಲ ಹಿಂದುಗಳಲ್ಲಿ ಭ್ರಾತೃತ್ವವನ್ನು ನಾವು ಜಾಗೃತಗೊಳಿಸುತ್ತೇವೆ. ಇದು ಜಾತಿಭೇದದ ಅಡ್ಡಿಗಳನ್ನೆಲ್ಲ ಕರಗಿಸುತ್ತದೆ. ಇದರ ಯಶಸ್ಸೆಲ್ಲ ಡಾ॥ ಹೆಡಗೆವಾರರಿಗೆ ಸೇರಿದ್ದು."

ಗಾಂಧೀಜಿಗೆ ಬಹಳ ಆಶ್ಚರ್ಯವಾಯಿತು. ನಂತರ ನಾವು ಪ್ರದರ್ಶನ ವಿಭಾಗಕ್ಕೆ ಹೋದೆವು. ಸಂಘದಲ್ಲಿ ಅವಶ್ಯಕವಾದ ವಸ್ತುಗಳನ್ನೆಲ್ಲ ಅಲ್ಲಿ ಶುಚಿಯಾಗಿ ಪ್ರದರ್ಶಿಸಲಾಗಿತ್ತು. ಫಲಕಗಳ ಮೇಲೆ ಚಿತ್ರಗಳು, ಪದ್ಯಗಳು, ಅಮೃತ ವಚನಗಳನ್ನು ಬರೆಯಲಾಗಿತ್ತು. ಪದ್ಯ ಹಾಗೂ ಅಮೃತವಚನಗಳನ್ನು ಗಮನವಿಟ್ಟು ಓದಿದ ಗಾಂಧೀಜಿ ಅವುಗಳ ಉದಾತ್ತ ಭಾವನೆಯನ್ನು ಪ್ರಶಂಸಿಸಿದರು. ಅವರಿಗೆ ವಿಶೇಷವಾಗಿ ಹಿಡಿಸಿದ ವಚನವೆಂದರೆ : "ಸ್ವಯಂಸೇವಕನೆಂದರೆ ಸೇವೆ ಮಾಡುವ ಕೂಲಿಯಲ್ಲ, ರಾಷ್ಟ್ರಕ್ಕಾಗಿ ಸರ್ವಸ್ವ ತ್ಯಾಗ ಮಾಡುವ ವೀರ."

## ರಾಮ, ಕೃಷ್ಣರು 'ದೇವ'ರಲ್ಲ !

ಚಿತ್ರಗಳ ಕಡೆ ಗಾಂಧೀಜಿಯವರ ಗಮನ ಹರಿಯಿತು. ಮಧ್ಯದಲ್ಲಿ ಭಾರತಮಾತೆಯ ಭಾರಿ ಚಿತ್ರ, ಒಂದು ಕಡೆ ಶ್ರೀರಾಮ, ಶ್ರೀ ಕೃಷ್ಣರು, ಇನ್ನೊಂದು ಕಡೆ ರಾಣಾ ಪ್ರತಾಪ್, ಶಿವಾಜಿ ಮಹಾರಾಜರು. ಅದರ ಮುಂದೆ ಮೇಜಿನ ಮೇಲೆ ಡಾ॥ ಹೆಡಗೆವಾರರ ಭಾವಚಿತ್ರ. ಕೇವಲ ಆರು ಚಿತ್ರಗಳಿರುವುದು ನೋಡಿ ಗಾಂಧೀಜಿಗೆ ಆಶ್ಚರ್ಯವಾಯಿತು. "ರಾಮ, ಕೃಷ್ಣರ ಚಿತ್ರಗಳು ಮಾತ್ರ ಇವೆ. ಶಂಕರ ಮತ್ತು ಗಣಪತಿ ನಿಮಗೆ ದೇವರಲ್ಲವೇ?" ಎಂದು ಕೇಳಿದರು.

"ಇಲ್ಲಿ ದೇವರ ಚಿತ್ರಗಳು ಇಲ್ಲ" ಎಂದೆ ನಾನು. "ರಾಮ ಮತ್ತು ಕೃಷ್ಣರ ಚಿತ್ರಗಳನ್ನೇಕೆ ಪ್ರದರ್ಶಿಸಿದ್ದೇವೆಂದರೆ ಅವರನ್ನು ನಾವು ರಾಷ್ಟ್ರೀಯ ಆದರ್ಶ ವೀರಪುರುಷರಾಗಿ ಪರಿಗಣಿಸುತ್ತೇವೆ."

## 'ನಾನು ಡಾ॥ ಹೆಡಗೆವಾರರನ್ನು ಭೇಟಿಯಾಗಬಹುದೇ ?'

"ಮಧ್ಯದಲ್ಲಿರುವ ಆ ಭಾವಚಿತ್ರ ಯಾರದು?"



ಸಂಘಸ್ಥಾಪಕ ಡಾ॥ ಹೆಡಗೆವಾರರೊಡನೆ ಮಹಾತ್ಮಾಜಿ ಮಾತುಕತೆ. ಡಾಕ್ಟರಜಿ ಜೊತೆಯಲ್ಲಿ ಶ್ರೀ ಅಪ್ಪಾಜಿ ಜೋಷಿ ಮತ್ತು ಶ್ರೀ ಲ. ಬ. ಭೋಪಟಕರ್.

"ಅವರು ಪೂಜ್ಯ ಡಾ॥ ಹೆಡಗೆವಾರರು."

"ಓಹೋ, ಅಸ್ಪೃಶ್ಯತೆ ನಿವಾರಣೆ ಸಂಬಂಧದಲ್ಲಿ ನೀವು ಹೇಳಿದ ಡಾ॥ ಹೆಡಗೆವಾರರೇ ಏನು ? ಅವರಿಗೂ ಸಂಘಕ್ಕೂ ಏನು ಸಂಬಂಧ ?"

"ಅವರು ಸಂಘದ ಮುಖ್ಯಸ್ಥರು. ನಾವು ಅವರನ್ನು ಸರಸಂಘಚಾಲಕ್ ಎಂದು ಕರೆಯುತ್ತೇವೆ. ಸಂಘವನ್ನು ಅವರೇ ಸ್ಥಾಪಿಸಿದರು. ನಾವೆಲ್ಲ ಅವರ ನಾಯಕತ್ವದಲ್ಲಿ ಕೆಲಸ ಮಾಡುತ್ತೇವೆ."

"ನಾನು ಡಾ॥ ಹೆಡಗೆವಾರರನ್ನು ಭೇಟಿಯಾಗಬಹುದೇ? ಈ ಸಂಸ್ಥೆಯ ಬಗ್ಗೆ ಅವರಿಂದಲೇ ನೇರವಾಗಿ ತಿಳಿದುಕೊಳ್ಳಬಯಸುತ್ತೇನೆ."

"ಅವರು ನಾಳೆ ಶಿಬಿರಕ್ಕೆ ಬರಲಿದ್ದಾರೆ. ನೀವಿಷ್ಟಪಟ್ಟರೆ ನಿಮ್ಮಲ್ಲಿಗೆ ಬರುತ್ತಾರೆ."

ಭೇಟಿಯ ಸಮಯ ಮುಗಿದಿತ್ತು. "ನಮ್ಮ ಶಿಬಿರ ನೋಡಿ ನಮ್ಮನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ್ದೀರಿ. ಈಗ ನಮ್ಮಲ್ಲಿ ನಿಮಗೆ ಕಂಡುಬಂದ ಕುಂದುಕೊರತೆಗಳನ್ನು ಹೇಳಬೇಕೆಂದು ವಿನಂತಿಸುತ್ತೇನೆ" ಎಂದೆ.

"ಏನೂ ಕೊರತೆಯಿಲ್ಲ" ಎಂದ ಗಾಂಧೀಜಿ, "ಎಲ್ಲ ದೃಷ್ಟಿಯಿಂದಲೂ ನೀವು ಅದ್ಭುತವಾದ ಕೆಲಸ ಮಾಡುತ್ತಿದ್ದೀರಿ. ಏನಾದರೂ ಕೊರತೆಯಿದೆ ಎಂದಾದರೆ ಅದು ನೀವು ಇತರ ಮತಗಳ ಜನರನ್ನು ಸೇರಿಸಿಕೊಳ್ಳದೇ ಇರುವುದು" ಎಂದರು.

"ಇತರ ಮತಗಳ ಪ್ರಶ್ನೆಯೇ ಇಲ್ಲ" ನಾನೆಂದೆ. "ಇಲ್ಲಿಯ ರಾಷ್ಟ್ರೀಯ ಸಮಾಜವಾದ ಹಿಂದೂ ಸಮಾಜವೇ ಜಾತಿ, ಪ್ರಾಂತ, ಭಾಷೆ ಮುತ್ತಿತರ ಕಾರಣಗಳಿಂದ ಒಡೆದುಹೋಗಿದೆ. ಈ ಸಮಾಜದಲ್ಲಿ ಏಕತೆಯ ಭಾವನೆ ಮೂಡಿಸಿದರೆ ಇತರೆಲ್ಲ ಸಮಸ್ಯೆಗಳನ್ನೂ ಸುಲಭವಾಗಿ ಪರಿಹರಿಸಬಹುದೆಂದು ನಮಗನಿಸುತ್ತದೆ. ಈ ಕಾರಣದಿಂದಲೇ ನಮ್ಮ ಕೆಲಸವನ್ನು ಹಿಂದುಗಳ ಸಂಘಟನೆಗೆ ಮಾತ್ರ ಸೀಮಿತಗೊಳಿಸಿದ್ದೇವೆ. ಇತರ ಮತಗಳ ಬಗ್ಗೆ ನಮಗೆ ದ್ವೇಷವಿಲ್ಲ. ಪ್ರತಿಯೊಬ್ಬನೂ ತನ್ನ ಧರ್ಮವನ್ನು ಪ್ರಾಮಾಣಿಕವಾಗಿ ಅನುಸರಿಸಬೇಕು ಮತ್ತು ಇತರ ಮತಗಳ ಬಗ್ಗೆ ಸಹಿಷ್ಣುತೆಯಿಂದಿರಬೇಕು ಎಂದು ನಾವು ಭಾವಿಸುತ್ತೇವೆ. ಹಿಂದುವು ತನ್ನ ಧರ್ಮವನ್ನೇ ಪ್ರೀತಿಸದಿದ್ದರೆ ಇತರ ಮತಗಳನ್ನು ಹೇಗೆ ಪ್ರೀತಿಸಿಯಾನು ? ಆದ್ದರಿಂದ ಹಿಂದೂ ಧರ್ಮ, ಹಿಂದೂ ಸಂಸ್ಕೃತಿ ಮತ್ತು ಹಿಂದೂ ಸಮಾಜದ ಬಗ್ಗೆ ಗೌರವದ ಭಾವನೆ ಮೂಡಿಸುವುದೇ ಪ್ರಥಮ ಕರ್ತವ್ಯವೆಂದು ನಮ್ಮ ಭಾವನೆ. ನಮ್ಮ ದೃಷ್ಟಿಯಲ್ಲಿ ಇದು ಪವಿತ್ರ ರಾಷ್ಟ್ರೀಯ ಕರ್ತವ್ಯ. ಇದರಲ್ಲೇನಾದರೂ ತಪ್ಪಿದ್ದರೆ ದಯವಿಟ್ಟು ಹೇಳಿ."

## 'ಇತರರನ್ನು ದ್ವೇಷಿಸದೆ ಹಿಂದುಗಳನ್ನು ಸಂಘಟಿಸುವುದರಲ್ಲಿ ಏನೂ ತಪ್ಪಿಲ್ಲ'

ಇದನ್ನು ಕೇಳಿದ ಗಾಂಧೀಜಿ, "ಇತರರನ್ನು ದ್ವೇಷಿಸದೆ ಹಿಂದುಗಳನ್ನು ಸಂಘಟಿಸುವುದು ರಾಷ್ಟ್ರೀಯ ಹಿತಕ್ಕೆ ವಿರುದ್ಧವಾದುದೇನಲ್ಲ.

ಆದರೆ ಈ ತತ್ವದ ಹಿನ್ನೆಲೆಯನ್ನು ನಿಮ್ಮ ನಾಯಕರೊಡನೆ ಚರ್ಚಿಸಬಯಸುತ್ತೇನೆ. ಅವರ ಹೆಸರನ್ನು ಕೇಳಿದ್ದರೂ ಅವರ ಪರಿಚಯ ನನಗಿಲ್ಲ. ಆದ್ದರಿಂದ ದಯವಿಟ್ಟು ಅವರೊಡನೆ ಭೇಟಿಯ ವ್ಯವಸ್ಥೆ ಮಾಡಿ. ನಾಳೆ ಮಧ್ಯಾಹ್ನ ಅವರನ್ನು ಆಹ್ವಾನಿಸಲು ಯಾರನ್ನಾದರೂ ಕಳಿಸುತ್ತೇನೆ" ಎಂದರು.

ನಾನು "ಖಂಡಿತ ಯತ್ನಿಸುತ್ತೇನೆ. ಅವರ ಭೇಟಿಯಾಗುವುದೆಂದು ನನಗನಿಸುತ್ತದೆ" ಎಂದೆ.

"ಇನ್ನೊಂದು ವಿಷಯ" ಗಾಂಧೀಜಿ ಹೇಳಿದರು, "ಬಂಗಲೆಯಲ್ಲಿನ ಟೆಂಟ್ ನಿಮಗೆ ಬೇಕೆಂದು ಶ್ರೀಮತಿ ಜಾನಕಿಬಾಯಿ ಬಜಾಜ್ ನನಗೆ ಹೇಳಿದರು. ನಿಮಗೆ ಬೇಕಾದರೆ ತೆಗೆದುಕೊಳ್ಳಬಹುದು."

"ಆ ಟೆಂಟ್ ಡಾ| ಹೆಡಗೆವಾರರಿಗೋಸ್ಕರ ಬೇಕೆಂದಿದ್ದೆವು. ಅದರಿಂದ ನಿಮಗೆ ತೊಂದರೆಯಾಗುವ ಹಾಗಿದ್ದರೆ ಬೇರೆ ವ್ಯವಸ್ಥೆ ಮಾಡುತ್ತೇವೆ" ಎಂದು ನಾನು ಹೇಳಿದೆ. ಅದಕ್ಕೆ ಗಾಂಧೀಜಿ, "ನೀವು ಖಂಡಿತ ಟೆಂಟ್ ತೆಗೆದುಕೊಂಡು ಹೋಗಬಹುದು. ಅದನ್ನು ಇಲ್ಲಿಗೆ ಕಳಿಸುವಂತೆ ನಾನೇ ವ್ಯವಸ್ಥೆ ಮಾಡುತ್ತೇನೆ" ಎಂದರು. ಈ ಮಾತು ಕೇಳಿ ನನಗೆ ಸ್ವಾಭಾವಿಕವಾಗಿ ಸಂತೋಷವಾಯಿತು. ಬಹಳ ಗೌರವದಿಂದ ಗಾಂಧೀಜಿಯವರನ್ನು ಬೀಳ್ಕೊಟ್ಟೆ. ಸಂಜೆಯ ಹೊತ್ತಿಗೆ ಶ್ರೀ ಜಮನಾಲಾಲರ ಕಾರಿನಲ್ಲಿ ಟೆಂಟ್ ನಮ್ಮಲ್ಲಿಗೆ ಬಂದಿತು. ಪೂಜನೀಯ ಡಾಕ್ಟರಜಿಯವರಿಗಾಗಿ ಅದನ್ನು ಕಟ್ಟಿ ನಿಲ್ಲಿಸಿದೆವು.

## ೧೯೩೪ರ ಡಿಸೆಂಬರ್ ೨೫

ಡಿಸೆಂಬರ್ ೨೫ ಶಿಬಿರದ ಕೊನೆಯ ದಿನ. ಸಮಾರೋಪ ಸಮಾರಂಭಕ್ಕೆ ಪೂನಾದ ಪ್ರಸಿದ್ಧ ಮುಖಂಡ ಶ್ರೀ ಅಣ್ಣಾಸಾಹೇಬ್ ಭೋಪಟಕರ್ ಅಧ್ಯಕ್ಷತೆ ವಹಿಸುವವರಿದ್ದರು. ಹೆಚ್ಚುಕಡಿಮೆ ಒಂದೇ ಸಮಯಕ್ಕೆ ಡಾ| ಹೆಡಗೆವಾರ್ ಮತ್ತು ಶ್ರೀ ಭೋಪಟಕರರು ರೈಲಿನಲ್ಲಿ ವರ್ಧಾ ತಲಪಿದರು. ರೈಲ್ವೆ ನಿಲ್ದಾಣದಲ್ಲಿ ಗಣವೇಷಧಾರಿ ಸ್ವಯಂಸೇವಕರು ಅವರಿಗೆ ಸಮಾರಂಭಪೂರ್ವಕ ಸ್ವಾಗತ ಬಯಸಿದರು. ಶಿಬಿರಕ್ಕೆ ಹೋಗುವ ದಾರಿಯಲ್ಲಿ ಡಾಕ್ಟರಜಿಯವರಿಗೆ ನಾನು ಶಿಬಿರಕ್ಕೆ ಮಹಾತ್ಮಾ ಗಾಂಧಿಯವರ ಭೇಟಿಯ ಬಗ್ಗೆ ತಿಳಿಸಿದೆ. ತುಂಬ ಸಂತೋಷಪಟ್ಟ ಅವರು, "ಬಹಳ ಒಳ್ಳೆಯದಾಯಿತು. ಮಹಾತ್ಮಾ ಗಾಂಧಿಯವರಂತಹ ಶ್ರೇಷ್ಠ ನಾಯಕರು ನಮ್ಮ ಶಿಬಿರಕ್ಕೆ ಭೇಟಿ ನೀಡಿ, ಅದನ್ನು ಹೊಗಳಿದರಿಂದ ಮೇಲೆ, ನಮ್ಮ ಸಂಘಟನೆ ಖಂಡಿತ ಯಶಸ್ವಿಯಾಗುತ್ತದೆ. ನಮ್ಮದು ದೈವೀ ಕಾರ್ಯ. ನಿರ್ಭೀಕ ರಾಷ್ಟ್ರೀಯ ನಾಯಕರು ಅದನ್ನು ಖಂಡಿತ ಆಶೀರ್ವದಿಸುವರು" ಎಂದರು.

## ಡಾಕ್ಟರಜಿಗೆ ಗಾಂಧೀಜಿ ಆಹ್ವಾನ

ನಾವು ಶಿಬಿರ ತಲಪಿದ ಸ್ವಲ್ಪ ಹೊತ್ತಿನ ನಂತರ ತಮ್ಮನ್ನು ಕಾಣಬೇಕೆಂಬ ಗಾಂಧೀಜಿಯವರ ಆಹ್ವಾನದೊಡನೆ ಸ್ವಾಮಿ ಆನಂದರು ಡಾಕ್ಟರಜಿಯವರ ಬಳಿ ಬಂದರು. ಭೇಟಿಯ ಸಮಯ ರಾತ್ರಿ ಎಂಟೂವರೆಯೆಂದು ನಿರ್ಧರಿಸಲಾಯಿತು.

> ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಜನರನ್ನು ಸೇರಿಸಿಕೊಳ್ಳುವುದು ನನಗೆ ಸ್ವಲ್ಪವೂ ಸೇರುವುದಿಲ್ಲ.
>
> —ಗಾಂಧೀಜಿ

ಸಮಯಕ್ಕೆ ಸರಿಯಾಗಿ ಡಾಕ್ಟರ್ ಹೆಡಗೆವಾರ್, ಶ್ರೀ ಭೋಪಟಕರ್ ಮತ್ತು ನಾನು ಆಶ್ರಮಕ್ಕೆ ಹೋದೆವು. ಶ್ರೀ ಮಹದೇವಭಾಯಿ ದೇಸಾಯಿ ನಮ್ಮನ್ನು ಬರಮಾಡಿಕೊಂಡು ಗಾಂಧೀಜಿಯವರ ಕೋಣೆಗೆ ಕರೆದೊಯ್ದರು. ಗಾಂಧೀಜಿಯವರು ನಮ್ಮನ್ನು ಸ್ವಾಗತಿಸಲು ಮೇಲೆದ್ದು ಬಂದು ಡಾಕ್ಟರಜಿಯವರನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ನಂತರ ಇಬ್ಬರ ನಡುವೆ ಸುಮಾರು ಒಂದು ಗಂಟೆ ಕಾಲ ಮಾತುಕತೆ ನಡೆಯಿತು. ಈ ಮಾತುಕತೆಯಲ್ಲಿ ಆಗಾಗ್ಗೆ ಶ್ರೀ ಭೋಪಟಕರರೂ ಭಾಗವಹಿಸಿದರು.

**ಗಾಂಧೀಜಿ :** ಡಾಕ್ಟರ್ ಸಾಹೇಬ್, ನಿನ್ನೆ ನಿಮ್ಮ ಶಿಬಿರವನ್ನು ನೋಡಿದೆ. ಅಲ್ಲಿಯ ದಕ್ಷತೆಯಿಂದ ಕೂಡಿದ ವ್ಯವಸ್ಥೆ ಕಂಡು ನನಗೆ ತುಂಬ ಆನಂದವಾಯಿತು.

**ಡಾಕ್ಟರಜಿ :** ಶಿಬಿರಕ್ಕೆ ನೀವು ಭೇಟಿ ನೀಡಿದುದು ಸ್ವಯಂಸೇವಕರ ಅದೃಷ್ಟ. ನಾನು ಆಗ ಇರದಿದ್ದುದಕ್ಕೆ ವ್ಯಥೆಯಾಗುತ್ತದೆ. ಅನಿರೀಕ್ಷಿತವಾಗಿ ನೀವು ಶಿಬಿರಕ್ಕೆ ಭೇಟಿ ಕೊಡಲು ನಿರ್ಧರಿಸಿದಂತೆ ಕಾಣುತ್ತದೆ. ನನಗೆ ಮೊದಲೇ ಗೊತ್ತಿದ್ದರೆ ಆಗ ಇರಲು ಯತ್ನಿಸುತ್ತಿದ್ದೆ.

## 'ನಿಮ್ಮ ಘೋಷ್ ನನಗೆ ಬಹಳ ಚೆನ್ನಾಗಿ ಹಿಡಿಸಿತು'

**ಗಾಂ :** ಒಂದು ರೀತಿಯಲ್ಲಿ ನೀವು ಇರದೇ ಇದ್ದುದೇ ಒಳ್ಳೆಯದಾಯಿತೆನ್ನಬಹುದು. ನಿಮ್ಮ ಗೈರುಹಾಜರಿ ನಿಮ್ಮ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲು ನನಗೆ ಅವಕಾಶ ಮಾಡಿಕೊಟ್ಟಿತು. ಶಿಬಿರಕ್ಕೆ ಬಂದಿದ್ದವರ ಭಾರಿ ಸಂಖ್ಯೆ, ಅವರ ಶಿಸ್ತು ಮತ್ತು ಸ್ವಚ್ಛತೆಯಿಂದ ನನಗೆ ತುಂಬ ತೃಪ್ತಿಯಾಗಿದೆ. ನಿಮ್ಮ ಘೋಷ್ ಬಹಳ ಚೆನ್ನಾಗಿದೆ. ನನಗೆ ಸಂಗೀತ ಕೇಳುವುದೆಂದರೆ ತುಂಬ ಇಷ್ಟ. ರಾತ್ರಿ ಒಂಭತ್ತರ ನಂತರ ನಿಮ್ಮ ಘೋಷ್ ವಾದ್ಯ ಪ್ರಾರಂಭವಾಗುತ್ತದೆ. ಅದು ನಾನು ಮಲಗುವ ಸಮಯ. ಆದರೂ ಛಾವಣಿಗೆ ಹೋಗಿ ಅದನ್ನು ಕೇಳುತ್ತೇನೆ. ಇಷ್ಟು ಚೆನ್ನಾಗಿ ಬಾರಿಸಲು ನಿಮ್ಮ ಹುಡುಗರು ಎಲ್ಲಿ ಕಲಿತರು?

**ಡಾ :** ಸೈನ್ಯದ ಓರ್ವ ನಿವೃತ್ತ ಬ್ಯಾಂಡ್ ಅಧಿಕಾರಿಯನ್ನು ಆಕಸ್ಮಾತ್ ಭೇಟಿಯಾದೆ. ನಮ್ಮ ಹುಡುಗರಿಗೆ ಕಲಿಸುವಂತೆ ಅವರನ್ನು ಒಪ್ಪಿಸಿದೆ.

## 'ದುಡ್ಡೆಲ್ಲಿಂದ ತರುತ್ತೀರಿ?'

**ಗಾಂ :** ಬೆಲೆಬಾಳುವ ಘೋಷ್ ವಾದ್ಯಗಳನ್ನು ಕೊಳ್ಳುತ್ತೀರಿ ಮತ್ತು ಇಂತಹ ಬೃಹತ್ ಶಿಬಿರಗಳನ್ನು ನಡೆಸುತ್ತೀರಿ. ಇದಕ್ಕೆಲ್ಲ ಹಣವೆಲ್ಲಿಂದ ತರುತ್ತೀರಿ? ಸ್ವಯಂಸೇವಕರಿಂದ ಸದಸ್ಯಧನ ತೆಗೆದುಕೊಳ್ಳುತ್ತೀರಾ?

**ಡಾ :** ಸಂಘದಲ್ಲಿ ಸದಸ್ಯಧನದ ಪ್ರಶ್ನೆಯೇ ಇಲ್ಲ. ನಾವು ಭಗವಾ ಧ್ವಜವನ್ನು ಗುರುವಾಗಿ ಪರಿಗಣಿಸುತ್ತೇವೆ. ವರ್ಷಕ್ಕೊಮ್ಮೆ 'ಗುರುಪೂಜೆ' ಸಲ್ಲಿಸುತ್ತೇವೆ. ಆ ಸಮಯದಲ್ಲಿ ಪ್ರತಿಯೊಬ್ಬ ಸ್ವಯಂಸೇವಕನೂ ತನ್ನ ಕೈಲಾದುದನ್ನು 'ಗುರುದಕ್ಷಿಣೆ'ಯಾಗಿ ಸಲ್ಲಿಸುತ್ತಾನೆ. ಈ 'ಗುರುದಕ್ಷಿಣೆ' ಎಷ್ಟಿರಬೇಕೆಂಬ ಬಗ್ಗೆ ಯಾವ ನಿಯಮವೂ ಇಲ್ಲ. ಕೇವಲ ಒಂದು ಪುಷ್ಪವನ್ನು ಅರ್ಪಿಸುವ ಸ್ವಯಂಸೇವಕರೂ ಇದ್ದಾರೆ. ಸಹಸ್ರ ರೂಪಾಯಿವರೆಗೆ ಅರ್ಪಿಸುವ ಸ್ವಯಂಸೇವಕರೂ ಇದ್ದಾರೆ.

ತಾನೆಷ್ಟು ಕೊಟ್ಟಿದ್ದೇನೆಂದು ಯಾರೂ ಹೇಳುವುದಿಲ್ಲ. ಈ ರೀತಿ ಶೇಖರಿಸಿದ ನಿಧಿಯಿಂದ ಸಂಘದ ಚಟುವಟಿಕೆಗಳನ್ನು ನಡೆಸಲು ಸಹಾಯವಾಗುತ್ತದೆ. ಇನ್ನು ಶಿಬಿರಗಳಲ್ಲಿ ಸ್ವಯಂಸೇವಕರೇ ಹೆಚ್ಚಿನ ಪಾಲು ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ನಮ್ಮ ಖರ್ಚು ಮಿತವಾಗಿರುತ್ತದೆ. ಸ್ವಯಂಸೇವಕರು ನೀಡುವ ಶುಲ್ಕ ಇದಕ್ಕೆ ಸಾಕು.

**ಗಾಂ :** ಸ್ವಯಂಸೇವಕರು ಸ್ವತಃ ಗಣವೇಷ ಹೊಲಿಸಿಕೊಂಡು, ರೈಲ್ವೆ ಛಾರ್ಜು ವಹಿಸಿಕೊಂಡು, ಶಿಬಿರ ಶುಲ್ಕವನ್ನೂ ಕೊಡುವುದು ಆಶ್ಚರ್ಯದ ವಿಷಯ. ಇತರ ಸ್ವಯಂಸೇವಕ ಸಂಸ್ಥೆಗಳಲ್ಲಿ ಗಣವೇಷವನ್ನು ಪುಕ್ಕಟೆಯಾಗಿ ಕೊಟ್ಟು, ಭೋಜನವನ್ನೂ ಉಚಿತವಾಗಿ ನೀಡಿ, ರೈಲ್ವೆ ಛಾರ್ಜನ್ನೂ ಕೊಟ್ಟರೂ ಶಿಬಿರಗಳಿಗೆ ಯಾರೂ ಬರುವುದಿಲ್ಲ, ಒಂದು ವೇಳೆ ಬಂದರೂ ಅವರು ಶಿಸ್ತಿನಿಂದಿರುವುದಿಲ್ಲ. ಆದರೆ ನಿಮ್ಮ ಸ್ವಯಂಸೇವಕರಲ್ಲಿ ಇದೆಲ್ಲ ಹೇಗೆ ನಡೆಯುತ್ತದೆ ?

**ಡಾ :** ಇದಕ್ಕಾಗಿ ನಾವು ವಿಶೇಷವಾಗಿ ಏನೂ ಮಾಡುವುದಿಲ್ಲ. ಒಂದು ಧ್ಯೇಯದ ಬಗ್ಗೆ ನಿಷ್ಠೆಯಿದ್ದರೆ ತರುಣರಿಗೆ ಎಲ್ಲವೂ ಸಾಧ್ಯವೆಂದು ನನಗನಿಸುತ್ತದೆ. ನಮ್ಮ ಸಂಘಟನೆಯಲ್ಲಿ ಸ್ವಯಂಸೇವಕರು ಎಲ್ಲವನ್ನೂ ಸಂತೋಷದಿಂದ ಮಾಡುತ್ತಾರೆ, ಏನೋ ವಿಶೇಷವಾದುದನ್ನು ಮಾಡುತ್ತಿರುವುದಾಗಿ ಅವರು ಭಾವಿಸುವುದಿಲ್ಲ. ಬದಲಾಗಿ ಗಣವೇಷ ಸಿದ್ಧ ಮಾಡಿಕೊಳ್ಳುವುದರಲ್ಲಿ ಮತ್ತು ಶಿಬಿರಗಳಿಗೆ ಬರುವುದರಲ್ಲಿ ಅವರು ಪರಸ್ಪರ ಸ್ಪರ್ಧಿಸುತ್ತಾರೆ.

**ಗಾಂ :** ನೀವು ಶಾರೀರಿಕ ಶಿಕ್ಷಣ ನೀಡುತ್ತಿರುವುದು ಒಳ್ಳೆಯದು. ಆದರೆ 'ಡ್ರಿಲ್' ಏಕೆ? ಇಂಗ್ಲಿಷಿನಲ್ಲಿ ಆಜ್ಞೆಗಳು ಏಕೆ ?

**ಡಾ :** 'ಡ್ರಿಲ್'ನಿಂದ ಸ್ವಯಂಸೇವಕರಲ್ಲಿ ಶಿಸ್ತಿನ ದೃಢ ಭಾವನೆ ಉಂಟಾಗುತ್ತದೆಂದು ನನ್ನ ಅನುಭವ. ಇನ್ನು ಆಜ್ಞೆಗಳ ಬಗ್ಗೆ ಹೇಳುವಂತಿದ್ದರೆ ಅವಕ್ಕೆ ಸಂಸ್ಕೃತ ಶಬ್ದಗಳನ್ನು ತಯಾರಿಸುತ್ತಿದ್ದೇವೆ, ಇಷ್ಟರಲ್ಲೇ ಅವನ್ನು ಬದಲಾಯಿಸುವವರಿದ್ದೇವೆ.

**ಗಾಂ :** ನಿಮ್ಮ ಸ್ವಯಂಸೇವಕರು ತಮ್ಮ ಶಿಬಿರ ಸಾಮಗ್ರಿಯನ್ನು ಬೆನ್ನ ಮೇಲೆ ಹೊತ್ತು ೫-೧೦ ಮೈಲಿ ನಡೆಯಬಲ್ಲರೇ ಎಂಬುದನ್ನು ಪರೀಕ್ಷಿಸಿದ್ದೀರಾ ?

## "ನನಗೆ ಬಹಳ ಸಂತೋಷವಾಗಿದೆ. ದೇಶದಲ್ಲೆಲ್ಲೂ ನಾನು ಇಂತಹ ಭವ್ಯ ದೃಶ್ಯ ನೋಡಿಲ್ಲ" —ಗಾಂಧೀಜಿ

**ಡಾ :** ತುಂಬ ದೂರದ ಪರೀಕ್ಷೆಯನ್ನು ನಾವಿನ್ನೂ ಕೈಕೊಂಡಿಲ್ಲ. ಎರಡು ಮೈಲಿ ತಮ್ಮ ಸಾಮಗ್ರಿಗಳನ್ನು ಅವರು ಕೊಂಡೊಯ್ಯಬಲ್ಲರು, ಆದರೆ ೮-೧೦ ಮೈಲಿಗಳವರೆಗೆ ನಾವು ಹೋಗಿಲ್ಲ. ನಿಮ್ಮ ಸಲಹೆ ಪರಿಶೀಲನೆಗೆ ಯೋಗ್ಯವಾಗಿದೆ.

**ಗಾಂ :** ಸ್ವಯಂಸೇವಕರು ಒಂದು ರೂಪಾಯಿ ಮತ್ತು ಸ್ವಲ್ಪ ಆಹಾರಧಾನ್ಯವನ್ನು ಶಿಬಿರ ಶುಲ್ಕವಾಗಿ ಕೊಡುತ್ತಾರೆಂದು ಕೇಳಿದ್ದೇನೆ. ಇಷ್ಟಕ್ಕೇ ನೀವು ೯ ಊಟ ಹಾಕುತ್ತೀರಂತೆ. ಅಂದರೆ ಒಂದು ಊಟಕ್ಕೆ ೨ ಅಥವ ೩ ಆಣೆ ಆಯಿತು. ಇದನ್ನು ಹೇಗೆ ಮಾಡುತ್ತೀರಿ ? ನಾವು ಇಲ್ಲಿ ಊಟಕ್ಕೆ ಬಹಳ ಖರ್ಚು ಮಾಡಬೇಕಾಗುತ್ತದೆ.

ಪೂಜನೀಯ ಡಾಕ್ಟರಜಿಯವರು ಈ ಪ್ರಶ್ನೆಗೆ ಉತ್ತರಿಸುವುದರೊಳಗೆಯೇ ಶ್ರೀ ಭೋಪಟಕರರು ಮಧ್ಯೆ ಪ್ರವೇಶಿಸಿ, "ಅದಕ್ಕೆ ಕಾರಣ ನಿಮ್ಮ ಪದ್ಧತಿ. ನೀವು ಗುಡಿಸಲನ್ನಿಟ್ಟೀರಿ, ಆದರೆ ಅರಮನೆಯ ಹಾಗೆ ಅಲಂಕರಿಸುತ್ತೀರಿ. ಈಗ ತಾನೆ ನಾನು ಸ್ವಯಂಸೇವಕರ ಜೊತೆ ಊಟ ಮಾಡಿದೆ. ಅವರಲ್ಲಿ ಯಾವ ಭೇದಭಾವವೂ ಇಲ್ಲ. ಸಂಘದ ಉದಾಹರಣೆ ಅನುಕರಿಸಿದರೆ, ೨-೩ ಆಣೆಯಲ್ಲೇ ನೀವೂ ಊಟ ಕೊಡಬಹುದು. ನಿಮಗೆ ಎಲ್ಲವೂ ಪಸಂದಾಗಿರಲೂ ಬೇಕು, ಜೊತೆಗೆ ಖರ್ಚೂ ಆಗಬಾರದು. ಇವೆರಡೂ ಹೇಗೆ ಸಾಧ್ಯ ?" ಎಂದು ಕೇಳಿದರು.

### 'ಎಲ್ಲ ಜಾತಿಗಳನೂ ಹೇಗೆ ಒಟ್ಟಿಗೆ ತರುತ್ತೀರಿ ?'

ಈ ಪುಟ್ಟ ಭಾಷಣ ಕೇಳಿ ಎಲ್ಲರೂ ನಕ್ಕರು. ಗಾಂಧೀಜಿ ಈ ಮಾತಿಗೆ ಗಮನ ಕೊಡದೆ, "ಹರಿಜನರೂ ಸೇರಿ ಎಲ್ಲ ಜಾತಿಯ ಹಿಂದುಗಳೂ ಒಟ್ಟಿಗೆ ವಾಸಿಸುವುದನ್ನು ಮತ್ತು ಒಟ್ಟಿಗೆ ಊಟ ಮಾಡುವುದನ್ನು ನಿನ್ನೆ ನೋಡಿದೆ. ಇದರಿಂದ ಬಹಳ ಸಂತೋಷವಾಯಿತು. ಆದರೆ ಅದನ್ನು ಹೇಗೆ ಸಾಧಿಸಿದಿರೆಂದು ನನಗೆ ಗೊತ್ತಾಗುತ್ತಿಲ್ಲ. ಅದಕ್ಕಾಗಿ ಏನು ಮಾಡುತ್ತೀರಿ ?"

**ಡಾ :** ವಿಶೇಷ ಏನೂ ಮಾಡುವುದಿಲ್ಲ. ನಾವೆಲ್ಲ ಹಿಂದುಗಳೂ ಒಂದೇ ಎಂಬ ಶುದ್ಧ ಭಾವಾತ್ಮಕ ವಿಚಾರವನ್ನು ಅವರ ಮುಂದೆ ಇಡುತ್ತೇವೆ. ಆ ಭಾವನೆಯಿಂದಲೇ ಇದೆಲ್ಲ ಆಗುತ್ತಿದೆ ಎಂದು ನನ್ನ ವಿಚಾರ.

**ಗಾಂ :** ಈ ಭಾವನೆ ಮೂಡಿಸಲು ಯಾವ ವಿಶಿಷ್ಟ ಕಾರ್ಯಕ್ರಮ ಕೈಕೊಳ್ಳುತ್ತೀರೆಂದು ತಿಳಿಯಬಯಸುತ್ತೇನೆ.

**ಡಾ :** ಖಂಡಿತ ಹೇಳುತ್ತೇನೆ. ಸಂಘದ ಕಾರ್ಯದಲ್ಲಿ ಮುಚ್ಚಿಡುವಂತಹುದೇನೂ ಇಲ್ಲ. ವಾರಕ್ಕೊಮ್ಮೆ 'ಬೌದ್ಧಿಕ ವರ್ಗ' ವಿರುತ್ತದೆ. ಅದರಲ್ಲಿ ರಾಷ್ಟ್ರೀಯ ಐಕ್ಯ, ಚಾರಿತ್ರ್ಯ ಮತ್ತು ಧರ್ಮ, ಸಮಾಜ, ಸಂಸ್ಕೃತಿ ಹಾಗೂ ರಾಷ್ಟ್ರದ ಬಗ್ಗೆ ಪ್ರೇಮವನ್ನುಂಟುಮಾಡುವ ವಿಚಾರಗಳನ್ನು ಮಂಡಿಸುತ್ತೇವೆ. ಐತಿಹಾಸಿಕ ಕಥೆಗಳು ಮತ್ತು ರಾಮಾಯಣ, ಮಹಾಭಾರತದ ಘಟನೆಗಳನ್ನು ಹೇಳುತ್ತೇವೆ. ಇವುಗಳಿಂದ ಸ್ವಯಂಸೇವಕರಲ್ಲಿ ಉದಾತ್ತ ಭಾವನೆಗಳು ಮತ್ತು ಉತ್ಕಟ ಧ್ಯೇಯವಾದ ಉಂಟಾಗುತ್ತದೆಂದು ನನ್ನ ಅಭಿಪ್ರಾಯ. ಇದಕ್ಕಿಂತ ಹೆಚ್ಚು ನಾವೇನನ್ನೂ ಮಾಡುವುದಿಲ್ಲ.

**ಗಾಂ :** ಡಾಕ್ಟರ್, ನಿಮ್ಮ ವಿದ್ಯಾಭ್ಯಾಸ ಎಲ್ಲಾಯಿತು ?

**ಡಾ :** ನಾಗಪುರದಲ್ಲಿ ಮೆಟ್ರಿಕ್ಯುಲೇಶನ್ ಮುಗಿಸಿದೆ. ಅಲ್ಲೇ ಉಚ್ಚ ವ್ಯಾಸಂಗ ಮಾಡಲು ಸರ್ಕಾರದ ಅಸಂತೋಷವು ಅಡ್ಡಿ ಬಂದದ್ದರಿಂದ, ಕಲಕತ್ತೆಗೆ ಹೋಗಿ ನೇಷನಲ್ ಮೆಡಿಕಲ್ ಕಾಲೇಜಿನಲ್ಲಿ ಪದವಿ ಪಡೆದೆ.

### 'ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಸ್ವಯಂಸೇವಕ ಸಂಘಟನೆ ಏಕೆ ರಚಿಸಲಿಲ್ಲ ?'

**ಗಾಂ :** ನಿಮ್ಮ ಸಂಘಟನೆ ಖಂಡಿತವಾಗಿ ಚೆನ್ನಾಗಿದೆ. ಆದರೆ ಬಹಳ ಕಾಲ ನೀವು ಕಾಂಗ್ರೆಸ್ ಕಾರ್ಯಕರ್ತರಾಗಿದ್ದಿರೆಂದು ಕೇಳಿದ್ದೇನೆ. ಹಾಗಾದರೆ ಕಾಂಗ್ರೆಸ್ಸಿನಂತಹ ಜನಪ್ರಿಯ ಪಕ್ಷದ ಆಶ್ರಯದಲ್ಲೇ ಸ್ವಯಂಸೇವಕ

ಸಂಸ್ಥೆಯನ್ನು ಏಕೆ ಕಟ್ಟಲಿಲ್ಲ? ಪ್ರತ್ಯೇಕ ಸಂಘಟನೆಯನ್ನೇಕೆ ರಚಿಸಿದಿರಿ?

ಡಾ: ಮೊದಲು ಈ ಕೆಲಸವನ್ನು ಕಾಂಗ್ರೆಸ್ಸಿನಲ್ಲೇ ಪ್ರಾರಂಭಿಸಿದೆ. ೧೯೨೦ ರ ನಾಗಪುರ ಕಾಂಗ್ರೆಸ್‌ನಲ್ಲಿ ಸ್ವಯಂಸೇವಕ ದಳಕ್ಕೆ ನಾನೇ ಕಾರ್ಯದರ್ಶಿಯಾಗಿದ್ದೆ. ಆಗ ನನ್ನ ಮಿತ್ರರಾದ ಡಾ| ಪರಾಂಜಪೆ ಅಧ್ಯಕ್ಷರಾಗಿದ್ದರು. ನಂತರ ಪ್ರದೇಶ ಕಾಂಗ್ರೆಸ್ಸಿನ ನಾಯಕತ್ವದಲ್ಲಿ ಅಂತಹ ಸಂಘಟನೆಗಾಗಿ ನಾವು ಪ್ರಯತ್ನಿಸಿದೆವು. ಆದರೆ ಆ ಪ್ರಯತ್ನ ಯಶಸ್ವಿಯಾಗಲಿಲ್ಲ. ಆದ್ದರಿಂದ ಒಂದು ಸ್ವತಂತ್ರ ಸಂಘಟನೆಯನ್ನು ಪ್ರಾರಂಭಿಸಿದೆವು.

ಗಾಂ: ಕಾಂಗ್ರೆಸ್ಸಿನೊಳಗೆ ನಿಮ್ಮ ಯತ್ನಗಳು ಏಕೆ ಯಶಸ್ವಿಯಾಗಲಿಲ್ಲ? ಹಣದ ಕೊರತೆಯಿತ್ತೇ?

ಡಾ: ಇಲ್ಲ, ಇಲ್ಲ. ಹಣದ ಬಗ್ಗೆ ತೊಂದರೆಯೇ ಇರಲಿಲ್ಲ. ಹಣದಿಂದ ಕೆಲವು ವಿಷಯಗಳು ಸುಲಭವಾಗಬಹುದು. ಆದರೆ ಕೇವಲ ಹಣದ ಬಲದ ಮೇಲೆಯೇ ಯಾವುದೂ ಯಶಸ್ವಿಯಾಗಲಾರದು. ಆದ್ದರಿಂದ ಅದು ಹಣದ ಪ್ರಶ್ನೆಯಲ್ಲ, ಭಾವನೆಯ ಪ್ರಶ್ನೆ.

ಗಾಂ: ಅಂದರೆ ನಿಮ್ಮರ್ಥ ಕಾಂಗ್ರೆಸ್ಸಿನಲ್ಲಿ ಉದಾತ್ತ ಹೃದಯದ ಜನಗಳಿರಲಿಲ್ಲ ಅಥವ ಇಲ್ಲವೆಂದೇ?

## ಕಾಂಗ್ರೆಸ್ಸಿನ ಸ್ವಭಾವವೇ ಬೇರೆ

ಡಾ: ಅಲ್ಲ. ಕಾಂಗ್ರೆಸ್ಸಿನಲ್ಲಿ ಅನೇಕ ಒಳ್ಳೆಯ ವ್ಯಕ್ತಿಗಳಿದ್ದಾರೆ. ನಾನೇ ಸ್ವತಃ ಕಾಂಗ್ರೆಸ್ಸಿನಲ್ಲಿದ್ದೆ. ಆದರೆ ಪ್ರಶ್ನೆ ಮನೋಭಾವದ್ದು. ಒಂದು ನಿರ್ದಿಷ್ಟ ರಾಜಕೀಯ ಉದ್ದೇಶದ ಸುತ್ತ ಕಾಂಗ್ರೆಸ್ಸಿನ ಮನೋಭಾವ ಬೆಳೆದುಕೊಂಡು ಬಂದಿದೆ. ಆ ಗುರಿಯನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ಯೋಜಿಸಲಾಗುತ್ತದೆ ಮತ್ತು ಅವನ್ನು ನಡೆಸಲು ಸ್ವಯಂಸೇವಕರು ಬೇಕಾಗುತ್ತಾರೆ. ಸ್ವಂತ ಸ್ಫೂರ್ತಿಯಿಂದ ಕೆಲಸ ಮಾಡುವಂತಹರ ಶಕ್ತಿಶಾಲಿ ಸಂಘಟನೆಯಿಂದ ರಾಷ್ಟ್ರದ ಎಲ್ಲ ಸಮಸ್ಯೆಗಳನ್ನು ಪರಿಹರಿಸಬಹುದೆಂದು ಕಾಂಗ್ರೆಸ್ ನಂಬುವುದಿಲ್ಲ. ಸ್ವಯಂಸೇವಕನೆಂದರೆ ಸಭೆಗಳಲ್ಲಿ ಕುರ್ಚಿ ಮೇಜು ಜೋಡಿಸುವ, ಕೂಲಿಯಿಲ್ಲದೆ ದುಡಿಯುವ ಆಳೆಂದು ಕಾಂಗ್ರೆಸ್ಸಿಗರು ತಿಳಿಯುತ್ತಾರೆ. ಇಂತಹ ನಂಬಿಕೆಯಿಂದ ರಾಷ್ಟ್ರೀಯ ಪ್ರಗತಿಗಾಗಿ ದುಡಿಯುವ ನಿಷ್ಠಾವಂತ ಕಾರ್ಯಕರ್ತರನ್ನು ತಯಾರಿಸಲು ಹೇಗೆ ಸಾಧ್ಯ? ಆದ್ದರಿಂದಲೇ ಕಾಂಗ್ರೆಸ್ಸಿನೊಳಗೆ ಈ ಯೋಜನೆ ಯಶಸ್ವಿಯಾಗಲಿಲ್ಲ.

## ಸ್ವಯಂಸೇವಕ ಯಾರು?

ಗಾಂ: ಹಾಗಾದರೆ ಸ್ವಯಂಸೇವಕ್ ಎಂದರೆ ನಿಮ್ಮ ಕಲ್ಪನೆಯೇನು?

ಡಾ: ನಮ್ಮ ಅರ್ಥದಲ್ಲಿ ಸ್ವಯಂಸೇವಕನೆಂದರೆ ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧನಿರುವ ನಾಯಕ. ಇಂತಹ ಸ್ವಯಂಸೇವಕರ ನಿರ್ಮಾಣವೇ ಸಂಘದ ಉದ್ದೇಶ. ಈ ಸಂಘಟನೆಯಲ್ಲಿ ಸ್ವಯಂಸೇವಕ–ನಾಯಕ ಎಂಬ ಭೇದವಿಲ್ಲ. ನಾವೆಲ್ಲ ಸ್ವಯಂಸೇವಕರು, ಯಾರೂ ಹೆಚ್ಚುಕಡಿಮೆ ಇಲ್ಲ. ಇಲ್ಲಿ ಭೇದಭಾವವೇ ಇಲ್ಲ. ಹಣ ಮತ್ತಿತರ ಸಾಧನಗಳಿರದಿದ್ದರೂ ಸಂಘಕಾರ್ಯವು ಇಷ್ಟು ಸ್ವಲ್ಪ ಕಾಲದಲ್ಲೇ ಇಷ್ಟು ವಿಸ್ತರಿಸಿರುವುದರಲ್ಲಿ ಅಡಗಿರುವ ಗುಟ್ಟಾದರೂ ಇದೇ ಆಗಿದೆ.

ಗಾಂ: ಒಳ್ಳೆಯದು! ನಿಮ್ಮ ಕಾರ್ಯವು ನಿಶ್ಚಿತವಾಗಿಯೂ ರಾಷ್ಟ್ರಹಿತಕಾರಿಯಾಗಿದೆ. ಸಂಘವು ವರ್ಧಾ ಜಿಲ್ಲೆಯಲ್ಲಿ ಚೆನ್ನಾಗಿ ಬೆಳೆದಿದೆಯೆಂದು ಕೇಳಿದ್ದೇನೆ. ಶ್ರೀ ಜಮನಾಲಾಲ್ ಬಜಾಜರ ಸಹಾಯವೇ ಇದಕ್ಕೆ ಮುಖ್ಯ ಕಾರಣವೆಂದು ಭಾವಿಸುತ್ತೇನೆ.

ಡಾ: ನಾವು ಯಾರಿಂದಲೂ ಹಣ ಸಹಾಯವನ್ನು ಸ್ವೀಕರಿಸುವುದಿಲ್ಲ.

ಗಾಂ: ಹಾಗಾದರೆ ಇಷ್ಟು ದೊಡ್ಡ ಸಂಘಟನೆಯ ಖರ್ಚನ್ನು ಹೇಗೆ ನಿರ್ವಹಿಸುತ್ತೀರಿ?

ಡಾ: ನಾನು ಮೊದಲೇ ಹೇಳಿದಂತೆ, ಸ್ವಯಂಸೇವಕರೇ 'ಗುರುದಕ್ಷಿಣೆ'ಯ ರೂಪದಲ್ಲಿ ಹೆಚ್ಚೆಚ್ಚು ಅರ್ಪಿಸುವುದರ ಮೂಲಕ ಈ ಭಾರವನ್ನು ಹೊರುತ್ತಾರೆ.

ಗಾಂ: ಆಶ್ಚರ್ಯ! ನೀವು ಯಾರಿಂದಲೂ ಹಣವನ್ನೇ ಸ್ವೀಕರಿಸುವುದಿಲ್ಲವೇ!

ಡಾ: ತನ್ನ ಅಭಿವೃದ್ಧಿಗಾಗಿ ಈ ಕಾರ್ಯವು ಅಗತ್ಯವೆಂದು ಸಮಾಜಕ್ಕೆ ಅನ್ನಿಸಿದಾಗ ನಾವು ತೆಗೆದುಕೊಳ್ಳಬಹುದು. ಆಗ ಜನರು ನಾವು ಕೇಳದೆಯೇ ಸಂಘದ ಮುಂದೆ ಹಣದ ರಾಶಿ ಸುರಿಯುತ್ತಾರೆ. ಅಂತಹ ಸಹಾಯ ಸ್ವೀಕರಿಸಲು ನಮಗೆ ಆಕ್ಷೇಪಣೆಯೇನೂ ಇಲ್ಲ. ಸದ್ಯಕ್ಕೆ ನಾವು ಸ್ವಾವಲಂಬನೆಯ ಪದ್ಧತಿಯನ್ನೇ ಅನುಸರಿಸುತ್ತಿದ್ದೇವೆ.

ಗಾಂ: ಹಾಗಾದರೆ ಇದು ನಿಮ್ಮ ಪೂರ್ಣ ಸಮಯದ ಚಟುವಟಿಕೆಯಾಗಿರಬೇಕು. ನಿಮ್ಮ ವೈದ್ಯ ವೃತ್ತಿಯನ್ನು ಹೇಗೆ ನಡೆಸುತ್ತೀರಿ?

ಡಾ: ನಾನು ಪ್ರಾಕ್ಟೀಸ್ ಮಾಡುವುದೇ ಇಲ್ಲ.

ಗಾಂ: ಹಾಗಾದರೆ ನಿಮ್ಮ ಕುಟುಂಬವನ್ನು ಹೇಗೆ ನೋಡಿಕೊಳ್ಳುತ್ತೀರಿ?

ಡಾ: ನನಗೆ ಕುಟುಂಬವಿಲ್ಲ, ಅವಿವಾಹಿತ.

## 'ನಿಮ್ಮ ಘಟನೆ ನೋಡಬಹುದೇ?'

ಗಾಂಧೀಜಿಗೆ ತುಸು ಆಶ್ಚರ್ಯವಾದಂತಾಯಿತು: "ಓಹೋ! ಇಷ್ಟು ಅಲ್ಪಕಾಲದಲ್ಲೇ ನಿಮ್ಮ ಯಶಸ್ಸಿಗೆ ಅದೇ ಕಾರಣವಿರಬೇಕು. ನಿಮ್ಮ ಭೇಟಿಯಾಗಿದ್ದರಿಂದ ನನಗೆ ತುಂಬ ಸಂತೋಷವಾಗಿದೆ. ಈಗ ಕೇವಲ ಒಂದೇ ಪ್ರಶ್ನೆ. ಇಂತಹ ದೊಡ್ಡ ಸಂಘಟನೆಯನ್ನು ನಡೆಸುವುದರಿಂದ ಅದಕ್ಕೆ ಒಂದು ಘಟನೆಯಿರಬೇಕೆಂದು ಭಾವಿಸುತ್ತೇನೆ. ಅದನ್ನು ನೋಡಬಯಸುತ್ತೇನೆ. ನಿಮಗೆ ಅನುಕೂಲವಾದಾಗ ಅದನ್ನು ಕಳಿಸಬಹುದು.

ಡಾ: ನಮಗೆ ಘಟನೆಯೇ ಇಲ್ಲ. ಏನೂ ಬರೆಯುವ ಕೆಲಸವಿಟ್ಟುಕೊಳ್ಳದೆ ಪರಸ್ಪರ ಸಮಾಲೋಚನೆಯಿಂದ ಕಾರ್ಯಮಾಡುತ್ತ ಸಂಘಟನೆ ಮುನ್ನಡೆಸುವುದೇ ಮೊದಲು ನಮ್ಮ ಕಲ್ಪನೆಯಾಗಿತ್ತು. ನಮ್ಮ ಕಾರ್ಯ ಹೀಗೆಯೇ ಪ್ರಾರಂಭವಾಯಿತು. ಪರಮಾತ್ಮನ ಕೃಪೆಯಿಂದ ಸ್ವಲ್ಪ ಯಶಸ್ಸೂ ದೊರೆಯಿತು. ಆದರೆ ಶಾಖೆಗಳು ಹೆಚ್ಚಾದಂತೆ ಸಂಘಟನೆಯನ್ನು ಚೆನ್ನಾಗಿ ನಡೆಸಲು ನಾವು ಬರವಣಿಗೆಯ ಮೊರೆ ಹೋಗಬೇಕಾಯಿತು. ಕೆಲವು ವಿಚಾರಗಳ ಆಧಾರದ ಮೇಲೆ ಸಂಘಕಾರ್ಯ ನಡೆಯುತ್ತದೆ. ಈವರೆಗೆ ಘಟನೆಯನ್ನು ರಚಿಸುವ ಅವಶ್ಯಕತೆ ಬಂದಿಲ್ಲ. ಅಂತಹ ಅಗತ್ಯಬಿದ್ದಾಗ ಆ ಬಗ್ಗೆ ಯೋಚಿಸುತ್ತೇವೆ.

(೩೪ ನೇ ಪುಟಕ್ಕೆ)

## ಸಂಘದ ಶಿಬಿರದಲ್ಲಿ ಗಾಂಧೀಜಿ

(೨೮ ನೇ ಪುಟದಿಂದ)

**ಗಾಂ :** ನಾನೂ ಮೊದಲು ಇದೇ ರೀತಿ ಯೋಚಿಸಿದ್ದೆ. ಆದರೆ ಅದು ಅಸಾಧ್ಯವಾಯಿತು. ವಾಸ್ತವವಾಗಿ ನಾನು ತುಂಬ ಬರೆಯಬೇಕಾಗುತ್ತದೆ. ಒಂದಲ್ಲ ಒಂದು ದಿನ ನೀವೂ ಹಾಗೆಯೇ ಮಾಡಬೇಕಾದೀತು. ಆದರೆ ನಿಮ್ಮ ಸಂಘಟನೆಯ ಉದಾತ್ತ ಭಾವನೆಗಳು ಮತ್ತು ನಿಮ್ಮ ಅದ್ಭುತ ಅನುಶಾಸನವನ್ನು ನೋಡಿ ನನಗೆ ತುಂಬ ಆನಂದವಾಗಿದೆ. ನಿಮಗೆ ಯಶ ದೊರೆಯಲೆಂದು ಹಾರೈಸುತ್ತೇನೆ. ಇಲ್ಲಿಗೆ ಬಂದು ನೆನಗೆಲ್ಲವನ್ನೂ ವಿವರಿಸಿದ್ದಕ್ಕೆ ಧನ್ಯವಾದಗಳು.

**ಡಾ :** ನಿಮ್ಮಂತಹ ಸಾಧು ಪುರುಷರ ಆಶೀರ್ವಾದವೇ ನಮ್ಮ ಬಲ. ನಿಮ್ಮೊಡನೆ ಈ ಭೇಟಿಯು ನನಗೂ ಬಹಳ ಸಂತೋಷದ ವಿಷಯ.

ಈ ರೀತಿ ೧೯೩೪ ರಲ್ಲಿ ವರ್ಧಾದಲ್ಲಿ ಮಹಾತ್ಮಾ ಗಾಂಧಿ ಮತ್ತು ಡಾ|| ಹೆಡಗೆವಾರ್ ಈ ಇಬ್ಬರು ಮಹಾಪುರುಷರ ನಡುವಿನ ಭೇಟಿ ಮುಕ್ತಾಯವಾಯಿತು. ಮಹಾತ್ಮಾಜಿಯವರು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಆಶೀರ್ವದಿಸಿ ಅದಕ್ಕೆ ಯಶಸ್ಸನ್ನು ಕೋರಿದರು. ★